ಶ್ರೀ ಎನ್.ಜಿ. ನಾಯಕ್: ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿರತಕ್ಕದ್ದು ಸರಿಯಲ್ಲ, ಕನ್ನಡ ನಾಡಿಗೆ ಒಳ್ಳೆಯ ಆಡಳಿತವನ್ನು ಕೊಟ್ಟು ಕನ್ನಡ ನಾಡಿಗೆ ಜೀವವನ್ನು ಕೊಟ್ಟಿರತಕ್ಕಂಥ ಶಿವಾಜಿಯ ಪ್ರತಿಮೆಯನ್ನು ಸ್ಥಾಪನೆ ಮಾಡಿರತಕ್ಕದ್ದು ತಪ್ಪಲ್ಲ. ಶಿವಾಜಿಯ ಪ್ರತಿಮೆಯನ್ನು ಸ್ಥಾಪನೆ ಮಾಡಲೇಬೇಕು. ವಾಟಾಳ್ನಾಗರಾಜ್ರವರೊಬ್ಬರು ಹೇಳಿದರೆ ಇಲ್ಲಿ ಆಗುವುದಿಲ್ಲ.

ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೆ ಕಂತು ಮತ್ತು ಎರಡನೆ ಕಂತು) ಮೇಲಿನ ಚರ್ಚೆ

ಉಪಾಧ್ಯಕ್ಷರು: 1993-94ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೆ ಕಂತು ಮತ್ತು ಎರಡನೆ ಕಂತು ಮೇಲೆ ಚರ್ಚೆ)

+ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷರೆ, 1993-94ನೇ ಸಾಲಿನ ಮೊದಲನೆಯ ಮತ್ತು ಎರಡನೆ ಕಂತಿನ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಂಡಿಸಿದ್ದಾರೆ. ಮೊದಲನೆಯ ಕಂತನ್ನು 3-9-1993ರಂದು ಈ ಸಭೆಯ ಮುಂದೆ ಮಂಡಿಸಲಾಗಿದೆ. ಇದುವರೆಗೂ ಸಹ ಅದರ ಬಗ್ಗೆ ಚರ್ಚೆಯಾಗಲಿಲ್ಲ. ಎರಡನೆಯ ಕಂತು ಇತ್ತೀಚೆಗೆ, ಅಂದರೆ 17-1-1994ರಂದು ಈ ಸಭೆಯ ಮುಂದೆ ಮಂಡಿಸಲಾಯಿತು. ಆದುದರಿಂದ ನನ್ನ ವಿನಂತಿ ಏನೆಂದರೆ, ಇದು ಬೇರೆ ಬೇರೆ ಅಧಿವೇಶನಗಳಲ್ಲಿ ಮಂಡಿಸಲ್ಪಟ್ಟಿದ್ದರೂ ಸಹ ಇವೆರಡು ಕಂತುಗಳನ್ನು ಒಟ್ಟಾಗಿ ತೆಗೆದುಕೊಳ್ಳಬೇಕಾಗಿರತಕ್ಕದ್ದು ಅವಶ್ಯಕವೆಂದು ನನ್ನ ಅನಿಸಿಕೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಎರಡು ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ ಎರಡು ಪೂರಕ ಅಂದಾಜುಗಳ ಬಾಬ್ತು ಒಂದೇ ಒಂದನ್ನು ಮಂಡಿಸಲು ಅವಕಾಶವಿದೆ. ಬೇರೆ ಬೇರೆ ಅಧಿವೇಶನಗಳಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಲ್ಪಟ್ಟಿದ್ದರೂ ಸಹ ಅವುಗಳು ಒಟ್ಟಾಗಿ ಚರ್ಚೆಯಾಗಬೇಕಾಗಿರತಕ್ಕದ್ದು ಅವಶ್ಯಕ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳಿಕೊಳ್ಳುವುದೇನೆಂದರೆ, ಎರಡು ಧನವಿನಿಯೋಗ ವಿಧೇಯಕಗಳನ್ನೇನು ತಾವು ಪ್ರತ್ಯೇಕವಾಗಿ ಮಂಡಿಸಿದ್ದೀರಿ, ಅದರ ಬದಲು ಒಂದೇ ವಿಧೇಯಕವನ್ನು ತಾವು ಮಂಡಿಸಲು ಮತ್ತು ಆ ಬಗ್ಗೆ ಪರಿಶೀಲನೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಮಾನ್ಯ ಉಪಾಧ್ಯಕ್ಷರು ಈ ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕೆಂದು ಒಂದು ಅಪ್ಪಣೆಯನ್ನು ಕೊಡಿಸಿದ್ದಾರೆ. ನಾನು ಸಹ ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ತಾವು ಏನು ಈ ಸಭೆಯ ಮುಂದೆ ಹೋದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಪೂರಕ ಅಂದಾಜು ಮಂಡಿಸಿದ್ದೀರಿ, ಮತ್ತು ಮೊನ್ನೆ 17ನೇ ತಾರೀಖು ಒಂದು ಪೂರಕ ಅಂದಾಜನ್ನು ಈ ಸಭೆಯ ಮುಂದೆ ಇಟ್ಟಿದ್ದೀರಿ, ಈ ಒಂದು ಮತ್ತು ಎರಡನೆಯ ಪೂರಕ ಅಂದಾಜುಗಳು ಏನಿವೆ, ಇವುಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇದಕ್ಕೆ ತಮ್ಮ ಆಕ್ಷೇಪಣೆ ಏನೂ ಇಲ್ಲದಿದ್ದರೆ ನಾನು ಎಲ್ಲವನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಆಗಬಹುದು.

ಶ್ರೀ ಹೆಚ್. ಏಕಾಂತಯ್ಯ: ಅದೇ ರೀತಿ ಧನ ವಿನಿಯೋಗ ಮಸೂದೆ ಸಹ ಅತ್ಯವಶ್ಯಕ ಎನಿಸಿದರೆ ಒಟ್ಟಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಆದುದರಿಂದ

ಧನ ವಿನಿಯೋಗ ವಿಧೇಯಕವನ್ನು ಸಹ ತಾವು ಇದರಲ್ಲಿ ಸೇರಿಸಿರಕೊಳ್ಳಬಹುದು. ಅದು ತಮಗೆ ಬಿಟ್ಟಿದ್ದು. ಈಗ ಮೊದಲನೆಯದಾಗಿ 1ನೇ ಕಂತಿನಲ್ಲಿ 141 ಕೋಟಿ 37 ಲಕ್ಷ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಹೇಳಿರುವಂತಹ ಮೊತ್ತವಾಗಿದೆ. ಈ ಪೈಕಿ ಸಾಮಾನ್ಯ ರಾಜಸ್ವದಿಂದ ಹೊರ ಹೋಗುವ ನಿವ್ವಳ ಮೊತ್ತ 83.25 ಕೋಟಿ ರೂಪಾಯಿಗಳು. ಅದೇ ರೀತಿ 2ನೆಯ ಕಂತಿನಲ್ಲಿ ಸುಮಾರು 60 ಪ್ರಕರಣಗಳಲ್ಲಿ ಒಟ್ಟು 96 ಕೋಟಿ 57 ಲಕ್ಷ ರೂಪಾಯಿಗಳ ಪೂರಕ ಅಂದಾಜಿನಲ್ಲಿ ಒದಗಿಸುವ ಮೊತ್ತ ಇದು. ಈ ಪೈಕಿ ಸಾಮಾನ್ಯ ರಾಜಸ್ವದಿಂದ ಹೊರ ಹೋಗುವ ನಿವ್ವಳ ಮೊತ್ತ 41 ಕೋಟಿ 9 ಲಕ್ಷ ರೂಪಾಯಿಗಳು ಆಗಿದೆ. ಈ ಎರಡು ಪೂರಕ ಅಂದಾಜುಗಳಲ್ಲಿ ಅನೇಕ ಬೇಡಿಕೆಗಳ ಬಾಬ್ತು ಸರ್ಕಾರದವರು ಈ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮೊಟ್ಟ ಮೊದಲನೆಯದಾಗಿ ಮಾನ್ಯ ಉಪಾಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಸಾದಿಲ್ವಾರ್ ನಿಧಿ ಏನಿದೆ. ಆ ಸಾದಿಲ್ವಾರ್ ನಿಧಿಯನ್ನು ಯಾವಾಗ ಉಪಯೋಗಿಸಿಕೊಳ್ಳಬೇಕು. ಎಂಬುದಕ್ಕೆ ನಾವು ತಮ್ಮದೇ ಆದಂತಹ ಸಂಪ್ರದಾಯವನ್ನು ಹಾಗೂ ನಿಯಮವನ್ನು ಮಾಡಿಕೊಂಡಿದ್ದೇವೆ. ಯಾವಾಗ ಅನ್-ಪೋರ್ಸಿನ್ ಎಕ್ಸ್ಪೆಂಡಿಚರ್ ಆಗುತ್ತದೆ ಅಂತಹ ಸಂದರ್ಭದಲ್ಲಿ ಮಾತ್ರ ನಾವು ಸಾದಿಲ್ವಾರ್ ನಿಧಿಯಿಂದ ಹಣವನ್ನು ತೆಗೆದುಕೊಳ್ಳುತ್ತೇವೆ. ಆ ರೀತಿ ಪಡೆದುಕೊಂಡ ಮೊತ್ತವನ್ನು ಮರು ಪಾವತಿ ಮಾಡುವುದಕ್ಕೆ ನಾವು ಪೂರಕ ಅಂದಾಜಿನಲ್ಲಿ ಆ ಮೊತ್ತವನ್ನು ಪಡೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಪ್ರಯತ್ನ ಮಾಡುತ್ತೇವೆ. ಅದರ ಅರ್ಥ ಏನು ಎಂದರೆ ಅನ್-ಪೋರ್ಸಿನ್ ಎಕ್ಸ್ಪೆಂಡಿಚರ್ ಅನ್ನು ಸಾದಿಲ್ವಾರ್ ನಿಧಿಯಿಂದ ಹಣವನ್ನು ಪಡೆಯುತ್ತೇವೆಂದರೆ ತಮಗೆ ಇಷ್ಟ ಬಂದ ರೀತಿಯಲ್ಲಿ ಕಾರ್ಯಾಂಗದವರು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಸದನದ ಅನುಮತಿ ಇಲ್ಲದೇ ಆ ಹಣವನ್ನು ತಮಗೆ ಇಷ್ಟ ಬಂದ ರೀತಿಯಲ್ಲಿ, ಅವಶ್ಯಕತೆ ಇಲ್ಲದಂತಹ ಸಂದರ್ಭದಲ್ಲಿ ಖರ್ಚು ಮಾಡದೇ ಇರಲಿ ಎಂಬ ದೃಷ್ಟಿಯಿಂದ ನಾವು ಇಂಥ ಒಂದು ಮಿತಿಯನ್ನು, ನಿಯಮವನ್ನು ಹಾಗೂ ಕಾನೂನನ್ನು ಮಾಡಿಕೊಂಡಿದ್ದೇವೆ. ಆದರೆ ಇಲ್ಲಿ 1993ರ ಅಂತ್ಯದಲ್ಲಿ ಅಂದರೆ ಮಾರ್ಚಿ 31ನೇ ತಾರೀಖು ನಾವು ಒಂದು ವಿಶೇಷವಾಗಿ ಹಣವನ್ನು ಖರ್ಚು ಮಾಡಿದ್ದೇವೆ. ಏತಕ್ಕೋಸ್ಕರ ಈ ಹಣವನ್ನು ಖರ್ಚು ಮಾಡಿದ್ದೇವೆ? Is it unforeseen expenditure?

ನಾವು ಸಂವಿಧಾನದಲ್ಲಿ ಮಾಡಿಕೊಂಡಿರುವಂತಹ ರಾಜ್ಯಾಂಗ ವಿಧಿಯ ಪ್ರಕಾರ ನಮಗೆ ಈ ಅವಕಾಶವಿದೆ. ಪೂರಕ ಅಂದಾಜುಗಳ ಬಾಬ್ತನ್ನೂ ಸಹ ಹೇಗೆ ಬಡ್ಜೆಟ್ನಲ್ಲಿ ನಾವು ಹಣವನ್ನು ವಿನಿಯೋಗ ಮಾಡುವುದಕ್ಕೆ ಅನುಮತಿ ಕೊಡುತ್ತೇವೆ, ಅದೇ ರೀತಿ ಪೂರಕ ಅಂದಾಜಿನಲ್ಲಿಯೂ ಸಹ ಈ ಅನುಮತಿಯನ್ನು ಕೊಡುವ ಅವಕಾಶವಿದೆ. ಅದಕ್ಕಿಂತ ಹೆಚ್ಚಾಗಿ ಏನಾದರೂ ಯಾವುದೇ ಒಂದು ಬೇಡಿಕೆಯಲ್ಲಿ ಅನುದಾನಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಬೇಕಾದರೆ, ಆ ಖರ್ಚು ಮಾಡಬೇಕಾದಂಥ excess over grant ಹೆಚ್ಚು ಹಣವನ್ನು ಖರ್ಚು ಮಾಡುವುದಾದರೆ ಅದು ನಿಜವಾಗಲೂ ಸಹ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮುಂದೆ ಹೋಗಿ ಪರಿಶೀಲನೆ ಮಾಡಿ ತದನಂತರ ಅದರ ಶಿಫಾರಸ್ಸಿನಂತೆ ಈ ಸಭೆಯ ಮುಂದೆ ಇಟ್ಟಾಗ ಅದಕ್ಕೆ ನಾವು ಅನುಮೋದನೆ ಕೊಡಬೇಕಾಗುತ್ತದೆ.

ಈ ಎರಡನ್ನೂ ಹೊರತುಪಡಿಸಿ, ನಾವು ಆ ಹಣವನ್ನು ಖರ್ಚುಮಾಡುವ ಹಾಗಿಲ್ಲ. ಒಂದು ಪಕ್ಷ ಯಾವುದೇ ಲೆಕ್ಕದಲ್ಲಿ ನಾವು - ಈ ಒಂದು ಪೂರಕ ಅಂದಾಜುಗಳಲ್ಲಿ ಸೇರಿಸುವಾಗ ಖರ್ಚುಮಾಡಿದಂತಹ ಹಣವನ್ನು ಪೂರಕ ಅಂದಾಜುಗಳಲ್ಲಿ ಸೇರಿಸುವುದಕ್ಕೆ ಸಾಧ್ಯವಿಲ್ಲ. ಪೂರಕ ಅಂದಾಜುಗಳಲ್ಲಿ ಯಾವ ಹಣವನ್ನು ಸೇರಿಸಬೇಕು ಎಂದರೆ ಯಾವ ಬೇಡಿಕೆಯಲ್ಲಿ, ಆಯಾಯ ಸಾಲಿನಲ್ಲಿ ಏನು ಹಣ ಇದೆ ಅದಕ್ಕಿಂತ

ಏನಾದರೂ ಹೆಚ್ಚಿಗೆ ಹಣವನ್ನು ಖರ್ಚುಮಾಡುವುದಕ್ಕೆ ಅವಶ್ಯಕತೆ ಇದೆ ಎಂದು ಕಂಡುಬಂದರೆ ಆಗ ನಾವು ಪೂರಕ ಅಂದಾಜುಗಳನ್ನು ಆಯಾಯ ಸಾಲಿನಲ್ಲಿ ಮಂಡಿಸುವಂತಹ ಒಂದು ಸಂಪ್ರದಾಯ ನಮ್ಮಲ್ಲಿ ಬಂದಿದೆ. ಆದರೆ ಇಲ್ಲಿ ಹಾಗೆ ಆಗಿಲ್ಲ. ಅನೇಕ ಸಂದರ್ಭದಲ್ಲಿ ಹಣವನ್ನು ಖರ್ಚು ಮಾಡಿ ತದನಂತರ ಪೂರಕ ಅಂದಾಜುಗಳಲ್ಲಿ ಹಣವನ್ನು ಪಡೆಯುವುದಕ್ಕೆ ಅನುಮತಿ ಪಡೆಯುವುದಕ್ಕೆ ಮಾಡುವಂತಹ ಪ್ರಯತ್ನ ನಡೆದಿರುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದು ಕಾನೂನಿಗೆ ವಿರುದ್ಧ, ನಿಯಮ ಬಾಹಿರ, ಮತ್ತು ಸಂಪ್ರದಾಯ ಬಾಹಿರ ಎಂಬ ಮಾತನ್ನು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಒಂದೊಂದಾಗಿ ಅಂದರೆ ಕೆಲವು ಮುಖ್ಯವಾದಂತಹ ಬೇಡಿಕೆಗಳನ್ನು ಮಾತ್ರ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊದಲನೇ ಕಂತಿನಲ್ಲಿ, ಬೇಡಿಕೆ ಒಂದರಲ್ಲಿ ಸುಮಾರು 42 ಕೋಟಿ 33 ಲಕ್ಷ ರೂಪಾಯಿಗಳನ್ನು ಹಾಗೂ ಬಂಡವಾಳ ನಿಧಿಯಲ್ಲಿ ಎಂದರೆ ರಾಜಸ್ವ ನಿಧಿಯಲ್ಲಿ 42 ಕೋಟಿಗಿಂತಲೂ ಹೆಚ್ಚು ಹಣವನ್ನು ಮತ್ತು ಬಂಡವಾಳ ನಿಧಿಯಲ್ಲಿ 3 ಕೋಟಿಗಳಿಗಿಂತ ಹೆಚ್ಚು ಹಣವನ್ನು ಅವರು ಖರ್ಚು ಮಾಡಿದ್ದಾರೆ. ಬೇಡಿಕೆ ಒಂದರ ಬಾಬ್ತು ಸುಮಾರು 45 ಕೋಟಿ ರೂಪಾಯಿಗಳನ್ನು ಈಗ ಖರ್ಚು ಮಾಡಿದ್ದಾರೆ. ಏನು ಪೂರಕ ಅಂದಾಜುಗಳ ಬಾಬ್ತು ಮೊದಲ ಕಂತಿನಲ್ಲಿ ಇಟ್ಟಿದ್ದಾರೆ ಅದರಲ್ಲಿ ಹೆಚ್ಚು ಹಣವನ್ನು ಅವರು ರಸಗೊಬ್ಬರ ಸಬ್ಸಿಡಿ ಯೋಜನೆ ಏನು ಇದೆ, ಇದನ್ನು ಜಾರಿ ಮಾಡಲಿಕ್ಕೆ ಅವಶ್ಯಕವಾಗಿ ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈಗಾಗಲೇ ನಾನು ತಮಗೆ ಹೇಳಿದೆ, ಇವತ್ತಿನ ದಿವಸ ಇಂತಹ ಯೋಜನೆಗಳಿಂದ ಕೇವಲ ಕೆಲವೇ ಜನರಿಗೆ ಮಾತ್ರ ಉಪಯೋಗವಾಗುತ್ತಿದೆ. ಅದು ಕೆಲವು ಗೊಬ್ಬರಗಳಿಗೆ 1 ಸಾವಿರ ರೂಪಾಯಿಗಳಿಂದ 340 ರೂಪಾಯಿಗಳವರೆಗೆ ಏನು ಸಬ್ಸಿಡಿ ಕೊಟ್ಟಿದಾರೆ, ಆ ಗೊಬ್ಬರವನ್ನು ಉಪಯೋಗಿಸುವಂತಹ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮತ್ತು ಬೇರೆ ರೈತರಿಗೆ ಏನು ಕೊಟ್ಟಿದ್ದಾರೆ ಅದರ ಒಂದು ಸಹಾಯ ಧನದ ಬಾಬ್ತು ಹಣವನ್ನು ಖರ್ಚು ಮಾಡಲಿಕ್ಕೆ ಈ ಹಣವನ್ನು ಉಪಯೋಗಿಸಿದ್ದಾರೆ. ಈ ರಸಗೊಬ್ಬರ ಸಬ್ಸಿಡಿ ಯೋಜನೆ ಮತ್ತು ಯಾವುದೇ ಯೋಜನೆ ಇರಬಹುದು, ಈ ಯೋಜನೆಯಿಂದ ಕೇವಲ ಒಂದು ವರ್ಗದ ಜನರಿಗೆ ಮಾತ್ರ ಸಹಾಯ ಆಗಬೇಕಾದಿದ್ದಿಲ್ಲ. ಅದರ ಜೊತೆಗೆ ಇಡೀ ರಾಜ್ಯದ ದೃಷ್ಟಿಯಿಂದ, ಉತ್ಪಾದನೆ ದೃಷ್ಟಿಯಿಂದ ಏನು ಕೃಷಿ ಉತ್ಪಾದನೆ ಹೆಚ್ಚು ಆಗಬೇಕು ಅದಕ್ಕೆ ಬೇಕಾದಂತಹ ಹೊಸ ಯೋಜನೆಗಳನ್ನು ಈ ಸಂದರ್ಭದಲ್ಲಿ ಇದಕ್ಕೆ ಸೇರಿಸಬೇಕಾದ ಅವಶ್ಯಕತೆ ಇತ್ತು ಎನ್ನುವ ಮಾತನ್ನು ಹೇಳುತ್ತೇನೆ. ಈ ಯೋಜನೆಯಿಂದ ಏನೂ ಸಾಧ್ಯವಿಲ್ಲ, ಕೇವಲ ಒಂದು ವರ್ಷ ಕೆಲವು ಜನರಿಗೆ ಮಾತ್ರ ಸಹಾಯ ಧನವನ್ನು ನೀಡುವುದರ ಮುಖಾಂತರ ಈ ದೇಶದ ಕೃಷಿಕರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲ ನಿರಂತರವಾಗಿ ಈ ದೇಶದ ಜನರಿಗೆ ಅನ್ನವನ್ನು ಕೊಡುವಂತಹ ರೈತರಿಗೆ ಪ್ರೋತ್ಸಾಹ ಧನವನ್ನು ಕೊಡುವ ಮುಖಾಂತರ ಉತ್ತೇಜನವನ್ನು ಕೊಡುವುದಕ್ಕೋಸ್ಕರ ಅವನು ಬೆಳೆದಂತಹ ಬೆಳೆಗೆ ಬೆಂಬಲದ ಬೆಲೆಯನ್ನು ನಾವು ಸರಿಯಾದಂತಹ ರೀತಿಯಲ್ಲಿ ಕೊಡುವುದರ ಮುಖಾಂತರ ಮತ್ತು ಅವರಿಗೆ ಬೇಕಾದಂತಹ ಸಾಲವನ್ನು ಕಡಿಮೆ ಬಡ್ಡಿಯ ಪ್ರಮಾಣದಲ್ಲಿ ಕೊಡುವುದರ ಮುಖಾಂತರ ಹೆಚ್ಚಿನ ಸಹಾಯ ಧನವನ್ನು ಆ ವರ್ಗದ ದುಡಿಯುವ ಜನರಿಗೆ ನಾವು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅದರ ಮುಖಾಂತರ ಈ ದೇಶದ ಜನರಿಗೆ ಬೇಕಾದಂತಹ ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದ ಕಾರಣ ಅಂತಹ ಒಂದು ನೀತಿಯನ್ನು ತಾವು ಅನುಸರಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಖರ್ಗೆಯವರ ಜಿಲ್ಲೆಯೂ ಸೇರಿದಂತೆ, ಕೆಲವು ಜಿಲ್ಲೆಗಳಲ್ಲಿ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆಗೆ

ಹಾನಿಯುಂಟಾಯಿತು. ಶೇಕಡ 75 ರಷ್ಟು ಹಾನಿಯಾದಂತಹ ಸಂದರ್ಭದಲ್ಲಿ, ಏನು ಕಾಯಿ ಕೊರೆಯುವ ಹುಳುಗಳಿಂದ ಹಾನಿ ಆಯಿತು, ಅವರಿಗೆ ಸಹಾಯ ಧನ ಕೊಡಲಿಕ್ಕೆ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಇಂತಹ ಕಾಯಿ ಕೊರೆಯುವ ಕೀಟಗಳಿಂದ ಆಗಿರಬಹುದು. ಅಥವಾ ಬೇರೆ ಕೀಟಗಳಿಂದ ಆಗಿರಬಹುದು, ಬೇರೆ ಕಾರಣಗಳಿಂದಾಗಿ ರೈತರಿಗೆ ಎಲ್ಲೆಲ್ಲಿ ನಷ್ಟವಾಗಿದೆ, ಎಲ್ಲೆಲ್ಲಿ ಶೇಕಡ 75ರಷ್ಟಾದರೂ ಸಹ ಅವರು ನಿಗಧಿ ಮಾಡಿರುವಂತೆ ಎಲ್ಲಿ ಈ ಒಂದು ತೊಂದರೆಯಾಗಿದೆ ಅಂತಹ ಎಲ್ಲಾ ಜಿಲ್ಲೆಗಳಲ್ಲೂ ಸಹ ಈ ಒಂದು ಸಹಾಯಧನದ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆ ರೀತಿ ಮಾಡುವುದರ ಮುಖಾಂತರ ದೇಶದ ಎಲ್ಲಾ ಭಾಗದ ಜನರಿಗೆ, ಎಲ್ಲಾ ಬೆಳೆಯನ್ನು ಬೆಳೆಯತಕ್ಕಂಥ ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮತ್ತೊಂದಕ್ಕೆ ಸುಮಾರು 61 ಲಕ್ಷ ರೂಪಾಯಿಗಳಷ್ಟು ಹಣವನ್ನು ಕೊಟ್ಟಿದ್ದಾರೆ. ಯಾರಿಗೆ ಕೊಟ್ಟಿದ್ದಾರೆ ಎಂದರೆ, ಕರ್ನಾಟಕ ಆಗ್ರೋ ಪ್ರೋಟೀನ್ 'ಲಿಮಿಟೆಡ್ ಎಂದು ಯಾವ ಸಂಸ್ಥೆ 1973ರಲ್ಲಿ ಸ್ಥಾಪನೆ ಆಯಿತು ಇದಕ್ಕೆ ಅವೊತ್ತಿನಿಂದ ಇವೊತ್ತಿನವರೆಗೂ ಹಣವನ್ನು ಬಿಡುಗಡೆ ಮಾಡಿದ್ದರೂ ಸಹ ಇದು ಸತತವಾಗಿ ನಷ್ಟ ಅನುಭವಿಸಿತು ಈ ಒಂದು ಸಂಸ್ಥೆಯ ಕಾರ್ಯನಿರ್ವಾಹಕ ಮಂಡಲಿಯ ಜನರು ಏನಿದ್ದಾರೆ, ಇವರ್‍ಯಾರಿಗೂ ಹೊಣೆಗಾರಿಕೆ ಇಲ್ಲವೆ? ಸತತವಾಗಿ 73ನೇ ಇಸವಿಯಿಂದ ಇದುವರೆಗೆ ಅಂದರೆ 20 ವರ್ಷಗಳ ಕಾಲ 6 1 ಲಕ್ಷ ರೂಪಾಯಿಗಳು ನಷ್ಟವಾಗಿದೆ ಎಂದರೆ ಈ ದೇಶದಲ್ಲಿ ಯಾರು ಆಡಳಿತ ಮಾಡುತ್ತಿದ್ದಾರೆ, ಈ ಆಡಳಿತ ಮಂಡಲಿಯ ಸೂಪರ್‌ವೈಸ್ ಮಾಡುತ್ತಿದ್ದಾರೆ ಅವರಿಗ್ಯಾರಿಗೂ ಹೊಣೆಗಾರಿಕೆ ಇಲ್ಲವೆ? ಆ ನೌಕರರಿಗೆ ಸಂಬಳವಿಲ್ಲದೆ ಈ ಮಂಡಲಿಯನ್ನು ಲಿಕ್ವಿಡೇಟ್ ಮಾಡತಕ್ಕ ಪರಿಸ್ಥಿತಿ ಬಂದಾಗ ನಾವು 61 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದರೆ, ಇಂಥ ಸಂಸ್ಥೆಗಳ ಬಗ್ಗೆ ಸರ್ಕಾರ ಮತ್ತು ಸಂಬಂಧಪಟ್ಟವರು ಎಷ್ಟರ ಮಟ್ಟಿಗೆ ಪರಿಶೀಲನೆ ಮಾಡಿದ್ದಾರೆ, ಅವರ ಹೊಣೆಗಾರಿಕೆ ಏನಿದೆ ಎಂಬುದನ್ನು ನಾವು ಕೇಳಬಯಸುತ್ತೇವೆ. 1973ರಿಂದ ಇದುವರೆಗೆ ಸುಮಾರು 20 ವರ್ಷಕಾಲ ಈ ಸಂಸ್ಥೆ ಏತಕ್ಕೆ ಇಷ್ಟೊಂದು ನಷ್ಟವನ್ನು ಅನುಭವಿಸಿತು? ಇದಕ್ಕೆ ಕಾರಣರಾದವರು ಯಾರು ಎಂದು ನೋಡಿ ಅವರಮೇಲೆ ಜವಾಬ್ದಾರಿ ಹೊರಿಸಲು ಸರ್ಕಾರ ಸಿದ್ಧವಿಲ್ಲ. ಈ ಸಂಸ್ಥೆ ಒಂದೇ ಅಲ್ಲ. ಇಂಥ ಸಂಸ್ಥೆಗಳು ಇನ್ನೂ ಈ ರಾಜ್ಯದಲ್ಲಿ ಅನೇಕವಿದ್ದರೂ ಕೂಡ ಇಂಥ ಕೆಟ್ಟ ಆಡಳಿತ ಪದ್ಧತಿಯಿಂದ ಹಾಳಾಗಿ ಹೋಗಿದ್ದರೆ ಸರ್ಕಾರದಲ್ಲಿ ಇದ್ದವರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೇ ಇದ್ದುದು ಕಾರಣವಾಗಿದೆ. ಈ ರೀತಿ ಮಾಡುತ್ತಾ ಹೋದರೆ ಈ ದೇಶದಲ್ಲಿ ಯಾವುದೇ ಸಂಸ್ಥೆಗಳೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದೇ ರೀತಿ ಪ್ರತಿಯೊಂದು ಸಂಸ್ಥೆಗಳಿಗೂ, ಮಂಡಲಿಗಳಿಗೂ ಬಂದರೆ ಅವು ಸಹ ಮುಚ್ಚಿ ಹೋಗುವುದರಲ್ಲಿ ಆಶ್ಚರ್ಯವಿಲ್ಲ. ಈ ಪ್ರವೃತ್ತಿಯನ್ನು ತೊಡೆದುಹಾಕಲಿಕ್ಕೆ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಚಾರವನ್ನು ತೋಟಗಾರಿಕೆ ಇಲಾಖೆಯ ಬೇಡಿಕೆಯ ಅಡಿಯಲ್ಲಿ ಏನು ಹೇಳಿದ್ದಾರೆಂದರೆ, ತಾಳೆ ಎಣ್ಣೆ ಬೆಳೆಯ ಪ್ರಾತ್ಯಕ್ಷಿಕ ಯೋಜನೆಯನ್ನು ಜಾರಿಗೆ ತಂದಿದ್ದಾರೆ.

ಈ ತಾಳೆ ಎಣ್ಣೆಯ ಬೆಳೆ ಏನಿದೆ ಇದು ಕೇವಲ ಶಿವಮೊಗ್ಗಾ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಅದು ಚಿತ್ರದುರ್ಗ ಇರಬಹುದು, ಅಥವಾ ಇನ್ನೂ ಬೇರೆ ಬೇರೆ ನೀರಾವರಿ ಪ್ರದೇಶ ಇರಬಹುದು, ಅಲ್ಲೆಲ್ಲಾ ಈ ತಾಳೆ ಎಣ್ಣೆ ಬೆಳೆಯ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಜಂಟಿ ವಲಯದಲ್ಲಿ ತಾವು ಏನು ಶಿವಮೊಗ್ಗಾ ಜಿಲ್ಲೆಗೆ ಹಣವನ್ನು ಕೊಡುತ್ತಿದ್ದೀರಿ ಅದಷ್ಟೇ

ಹಾನಿಯುಂಟಾಯಿತು. ಶೇಕಡ 75 ರಷ್ಟು ಹಾನಿಯಾದಂತಹ ಸಂದರ್ಭದಲ್ಲಿ, ಏನು ಕಾಯಿ ಕೊರೆಯುವ ಹುಳುಗಳಿಂದ ಹಾನಿ ಆಯಿತು, ಅವರಿಗೆ ಸಹಾಯ ಧನ ಕೊಡಲಿಕ್ಕೆ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಇಂತಹ ಕಾಯಿ ಕೊರೆಯುವ ಕೀಟಗಳಿಂದ ಆಗಿರಬಹುದು. ಅಥವಾ ಬೇರೆ ಕೀಟಗಳಿಂದ ಆಗಿರಬಹುದು, ಬೇರೆ ಕಾರಣಗಳಿಂದಾಗಿ ರೈತರಿಗೆ ಎಲ್ಲೆಲ್ಲಿ ನಷ್ಟವಾಗಿದೆ, ಎಲ್ಲೆಲ್ಲಿ ಶೇಕಡ 75ರಷ್ಟಾದರೂ ಸಹ ಅವರು ನಿಗಧಿ ಮಾಡಿರುವಂತೆ ಎಲ್ಲಿ ಈ ಒಂದು ತೊಂದರೆಯಾಗಿದೆ ಅಂತಹ ಎಲ್ಲಾ ಜಿಲ್ಲೆಗಳಲ್ಲೂ ಸಹ ಈ ಒಂದು ಸಹಾಯಧನದ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆ ರೀತಿ ಮಾಡುವುದರ ಮುಖಾಂತರ ದೇಶದ ಎಲ್ಲಾ ಭಾಗದ ಜನರಿಗೆ, ಎಲ್ಲಾ ಬೆಳೆಯನ್ನು ಬೆಳೆಯತಕ್ಕಂಥ ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮತ್ತೊಂದಕ್ಕೆ ಸುಮಾರು 61 ಲಕ್ಷ ರೂಪಾಯಿಗಳಷ್ಟು ಹಣವನ್ನು ಕೊಟ್ಟಿದ್ದಾರೆ. ಯಾರಿಗೆ ಕೊಟ್ಟಿದ್ದಾರೆ ಎಂದರೆ, ಕರ್ನಾಟಕ ಆಗ್ರೋ ಪ್ರೋಟೀನ್ 'ಲಿಮಿಟೆಡ್ ಎಂದು ಯಾವ ಸಂಸ್ಥೆ 1973ರಲ್ಲಿ ಸ್ಥಾಪನೆ ಆಯಿತು ಇದಕ್ಕೆ ಅವೊತ್ತಿನಿಂದ ಇವೊತ್ತಿನವರೆಗೂ ಹಣವನ್ನು ಬಿಡುಗಡೆ ಮಾಡಿದ್ದರೂ ಸಹ ಇದು ಸತತವಾಗಿ ನಷ್ಟ ಅನುಭವಿಸಿತು ಈ ಒಂದು ಸಂಸ್ಥೆಯ ಕಾರ್ಯನಿರ್ವಾಹಕ ಮಂಡಲಿಯ ಜನರು ಏನಿದ್ದಾರೆ, ಇವರ್‍ಯಾರಿಗೂ ಹೊಣೆಗಾರಿಕೆ ಇಲ್ಲವೆ? ಸತತವಾಗಿ 73ನೇ ಇಸವಿಯಿಂದ ಇದುವರೆಗೆ ಅಂದರೆ 20 ವರ್ಷಗಳ ಕಾಲ 6 1 ಲಕ್ಷ ರೂಪಾಯಿಗಳು ನಷ್ಟವಾಗಿದೆ ಎಂದರೆ ಈ ದೇಶದಲ್ಲಿ ಯಾರು ಆಡಳಿತ ಮಾಡುತ್ತಿದ್ದಾರೆ, ಈ ಆಡಳಿತ ಮಂಡಲಿಯ ಸೂಪರ್‌ವೈಸ್ ಮಾಡುತ್ತಿದ್ದಾರೆ ಅವರಿಗ್ಯಾರಿಗೂ ಹೊಣೆಗಾರಿಕೆ ಇಲ್ಲವೆ? ಆ ನೌಕರರಿಗೆ ಸಂಬಳವಿಲ್ಲದೆ ಈ ಮಂಡಲಿಯನ್ನು ಲಿಕ್ವಿಡೇಟ್ ಮಾಡತಕ್ಕ ಪರಿಸ್ಥಿತಿ ಬಂದಾಗ ನಾವು 61 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದರೆ, ಇಂಥ ಸಂಸ್ಥೆಗಳ ಬಗ್ಗೆ ಸರ್ಕಾರ ಮತ್ತು ಸಂಬಂಧಪಟ್ಟವರು ಎಷ್ಟರ ಮಟ್ಟಿಗೆ ಪರಿಶೀಲನೆ ಮಾಡಿದ್ದಾರೆ, ಅವರ ಹೊಣೆಗಾರಿಕೆ ಏನಿದೆ ಎಂಬುದನ್ನು ನಾವು ಕೇಳಬಯಸುತ್ತೇವೆ. 1973ರಿಂದ ಇದುವರೆಗೆ ಸುಮಾರು 20 ವರ್ಷಕಾಲ ಈ ಸಂಸ್ಥೆ ಏತಕ್ಕೆ ಇಷ್ಟೊಂದು ನಷ್ಟವನ್ನು ಅನುಭವಿಸಿತು? ಇದಕ್ಕೆ ಕಾರಣರಾದವರು ಯಾರು ಎಂದು ನೋಡಿ ಅವರಮೇಲೆ ಜವಾಬ್ದಾರಿ ಹೊರಿಸಲು ಸರ್ಕಾರ ಸಿದ್ಧವಿಲ್ಲ. ಈ ಸಂಸ್ಥೆ ಒಂದೇ ಅಲ್ಲ. ಇಂಥ ಸಂಸ್ಥೆಗಳು ಇನ್ನೂ ಈ ರಾಜ್ಯದಲ್ಲಿ ಅನೇಕವಿದ್ದರೂ ಕೂಡ ಇಂಥ ಕೆಟ್ಟ ಆಡಳಿತ ಪದ್ಧತಿಯಿಂದ ಹಾಳಾಗಿ ಹೋಗಿದ್ದರೆ ಸರ್ಕಾರದಲ್ಲಿ ಇದ್ದವರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೇ ಇದ್ದುದು ಕಾರಣವಾಗಿದೆ. ಈ ರೀತಿ ಮಾಡುತ್ತಾ ಹೋದರೆ ಈ ದೇಶದಲ್ಲಿ ಯಾವುದೇ ಸಂಸ್ಥೆಗಳೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದೇ ರೀತಿ ಪ್ರತಿಯೊಂದು ಸಂಸ್ಥೆಗಳಿಗೂ, ಮಂಡಲಿಗಳಿಗೂ ಬಂದರೆ ಅವು ಸಹ ಮುಚ್ಚಿ ಹೋಗುವುದರಲ್ಲಿ ಆಶ್ಚರ್ಯವಿಲ್ಲ. ಈ ಪ್ರವೃತ್ತಿಯನ್ನು ತೊಡೆದುಹಾಕಲಿಕ್ಕೆ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಚಾರವನ್ನು ತೋಟಗಾರಿಕೆ ಇಲಾಖೆಯ ಬೇಡಿಕೆಯ ಅಡಿಯಲ್ಲಿ ಏನು ಹೇಳಿದ್ದಾರೆಂದರೆ, ತಾಳೆ ಎಣ್ಣೆ ಬೆಳೆಯ ಪ್ರಾತ್ಯಕ್ಷಿಕ ಯೋಜನೆಯನ್ನು ಜಾರಿಗೆ ತಂದಿದ್ದಾರೆ.

ಈ ತಾಳೆ ಎಣ್ಣೆಯ ಬೆಳೆ ಏನಿದೆ ಇದು ಕೇವಲ ಶಿವಮೊಗ್ಗಾ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಅದು ಚಿತ್ರದುರ್ಗ ಇರಬಹುದು, ಅಥವಾ ಇನ್ನೂ ಬೇರೆ ಬೇರೆ ನೀರಾವರಿ ಪ್ರದೇಶ ಇರಬಹುದು, ಅಲ್ಲೆಲ್ಲಾ ಈ ತಾಳೆ ಎಣ್ಣೆ ಬೆಳೆಯ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಜಂಟಿ ವಲಯದಲ್ಲಿ ತಾವು ಏನು ಶಿವಮೊಗ್ಗಾ ಜಿಲ್ಲೆಗೆ ಹಣವನ್ನು ಕೊಡುತ್ತಿದ್ದೀರಿ ಅದಷ್ಟೇ

ವರ್ಷದ ಹೆಸರಿನಲ್ಲಿ ಸಭೆಗಳನ್ನು ಸಮಾರಂಭಗಳನ್ನು ಮಾಡುವುದಕ್ಕಾಗಿಯೇ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆ? ಇದರಿಂದ ಕನ್ನಡದ ಅಭಿವೃದ್ಧಿಯಾಗುತ್ತದೆಯೇ? ಕನ್ನಡದ ಸಂಸ್ಕೃತಿ ಅಭಿವೃದ್ಧಿಯಾಗುತ್ತದೆಯೇ? ಎಂಬುದನ್ನು ತಿಳಿಯಬಯಸುತ್ತೇನೆ. ಕನ್ನಡ ಜಾಗೃತಿ ವರ್ಷವನ್ನು ಆಚರಿಸುವುದಕ್ಕೆ ತಾವು ಏನು 40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ, ಅದು ಎಷ್ಟು ಮಟ್ಟಿಗೆ ಸದುಪಯೋಗವಾಗಿದೆ ಎಂಬುದನ್ನು ಹೇಳಬೇಕು. ಇವತ್ತು ನಮ್ಮಲ್ಲಿ ಒಂದು ರೀತಿಯ ಚಟ ಇದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ, ಅಥವಾ ಒಂದು ಪ್ರವೃತ್ತಿ ಇದೆ ಎಂದರೆ ತಪ್ಪಾಗಲಿಕ್ಕಿಲ್ಲ. ದೆಹಲಿಯಲ್ಲಿರುವ ಯಾವುದಾದರೂ ಒಂದು ಸಂಸ್ಥೆ ನಾವು ಒಂದು ಯಾವುದಾದರೂ ಪುಸ್ತಕವನ್ನು ಪ್ರಿಂಟ್ ಮಾಡುತ್ತೇವೆಂದರೆ ಅದಕ್ಕೆ 8-10 ಲಕ್ಷ ರೂಪಾಯಿಗಳನ್ನು ಕೊಡತಕ್ಕ ಪ್ರವೃತ್ತಿ ನಮ್ಮಲ್ಲಿ ಬೆಳೆದುಬಂದಿದೆ. ನಾನು ತಮ್ಮನ್ನು ಕೇಳುತ್ತೇನೆ. ತಾವು ಸರ್ದಾರ್ ಪಟೇಲ್‌ರ ಸಂಸ್ಥೆಗೆ ಅಥವಾ ಬೇರೆ ಸಂಸ್ಥೆಗೆ ಏನು 3 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಅದು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ ಈ ಸರ್ಕಾರ ಪಟೇಲರ ಸಂಸ್ಥೆಗೆ ತಾವು ಏನು 3 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ, ಅವರ ಕೃತಿಗಳನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿ ಹೊರತರುವುದಕ್ಕೇನಾದರೂ ಬಿಡುಗಡೆ ಮಾಡಿದ್ದೀರಾ? ಅಥವಾ ಬೇರೆ ಭಾಷೆಯಲ್ಲಿ ಈ ಪ್ರಸ್ತಕವನ್ನು ಪ್ರಿಂಟ್ ಮಾಡಿಸುವುದಕ್ಕೇನಾದರೂ ಈ ಹಣವನ್ನು ನೀವು ಕೊಟ್ಟಿದ್ದೀರಾ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿವರ ನೀಡಬೇಕು. ಇದಕ್ಕಿಂತ ಹೆಚ್ಚಾಗಿ ಇನ್ನೊಂದು ವಿಚಾರ ಹೇಳುವುದಾದರೆ ರಾಜ್ಯದ ಅಬ್ಕಾರಿಯ ಬಗ್ಗೆ ನಂತರ ನಾನು ಹೇಳುತ್ತೇನೆ. ಇವತ್ತು ಸುಮಾರು 4.98 ಕೋಟಿ ರೂಪಾಯಿಗಳನ್ನು ಬೆಂಗಳೂರು ವೈದ್ಯಕೀಯ ಕಾಲೇಜಿಗೆ ಕೊಟ್ಟಿದ್ದೀರಿ.

ಇದನ್ನು ಕೊಡಬೇಡಿ ಎಂದು ನಾನು ಹೇಳುವುದಿಲ್ಲ, ದಿನನಿತ್ಯದ ಚಟುವಟಿಕೆಗಳಿಗೋಸ್ಕರ ಇಷ್ಟು ಹಣವನ್ನು ಕೊಡಬೇಕಾದ ಅವಶ್ಯಕತೆ ಇದ್ದರೆ ಕೊಡಿ. ಆದರೆ ತಮಗೆ ಕೇಳುತ್ತೇನೆ. ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ದಿನನಿತ್ಯದ ಚಟುವಟಿಕೆಗೆ ಹಣವಿಲ್ಲ. ಒಂದು ಉದಾಹರಣೆ ಹೇಳುವುದಾದರೆ, ಒಬ್ಬ ಮಹಿಳೆ ಬಸುರಿ ಆಗಿದ್ದವಳು ಅಲ್ಲಿಗೆ ಬಂದಿದ್ದಳು. ನಾನು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಸಂದರ್ಶಕರ ಸಮಿತಿಯ ಅಧ್ಯಕ್ಷನಾಗಿದ್ದೇನೆ. ಒಬ್ಬ ಬಸುರಿ ಅಲ್ಲಿಗೆ ಬಂದಾಗ ಆಕೆಗೆ ಹೆರಿಗೆ ಮಾಡಿಸಿ ಎಂದಾಗ ಆಕೆಗೆ ಆಪರೇಷನ್ ಮಾಡಿಸುವ ಅವಶ್ಯಕತೆ ಇತ್ತು. ಈ ಮಾತನ್ನು ನಾನು ಹೇಳುವಾಗ ಬಹಳ ನೋವಾಗುತ್ತದೆ. ಅಲ್ಲಿ ಆಪರೇಷನ್ ಮಾಡಿದಾಗ ಅದನ್ನು ಹೊಲಿಯುವುದಕ್ಕೆ ಬೇಕಾದ ದಾರ ಇಲ್ಲ, ಆದ್ದರಿಂದ ಈಕೆಯನ್ನು ದಾವಣಗೆರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಅಂದರೆ ಇದಕ್ಕಿಂತ ಹೆಚ್ಚಿನ ನಾಚಿಕೆಗೇಡಿನ ಪ್ರಸಂಗ ಬೇರೊಂದು ಇದೆಯೆ ಎಂದು ಕೇಳಬಯುಸುತ್ತೇನೆ. ನಾನು ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ, ವಾಸ್ತವವಾಗಿ ನಮ್ಮ ಆಸ್ಪತ್ರೆಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಹೇಳಬಯಸುತ್ತೇನೆ. ಕಳೆದ ಸಾರಿ ನಮ್ಮ ಚಿತ್ರದುರ್ಗದಲ್ಲಿ ಕಾಲರಾ ಕಾಯಿಲೆ ಬಂದಾಗ ಒಂದು ಆಂಬುಲೆನ್ಸ್ ವ್ಯಾನ್ ಇರಲಿಲ್ಲ. ನಾವು ಕೇಳಿದಾಗ ವ್ಯಾನನ್ನು ಕಳುಹಿಸಿಕೊಡುತ್ತೇವೆಂದು ಹೇಳಿದಿರಿ. ನಮಗೆ ಒಂದು ವ್ಯಾನನ್ನು ಸಂಜಯಗಾಂಧಿ ಆಸ್ಪತ್ರೆಯಿಂದ ಸ್ಪೇರ್ ಆಗಿ ಕೊಟ್ಟಿದ್ದಾರೆ. ಆದರೆ ಇವೊತ್ತಿನವರೆಗೂ ನಮ್ಮ ಆಸ್ಪತ್ರೆಗೆ ಪ್ರತ್ಯೇಕವಾಗಿ ಒಂದು ಆಂಬ್ಯುಲೆನ್ಸ್ ವ್ಯಾನನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಆಗಿಲ್ಲ. ಅಂದಿನ ಆರೋಗ್ಯ ಮಂತ್ರಿಗಳು ಈ ಸಭೆಯಲ್ಲಿ ನಮಗೆ ಆಶ್ವಾಸನೆ ಕೊಟ್ಟರು; ನಂತರ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಆಶ್ವಾಸನೆ ಕೊಟ್ಟು ಈ ಕೂಡಲೇ ಇದನ್ನು ಮಾಡುತ್ತೇವೆಂದು ಹೇಳಿದರು. ಇವತ್ತು ನಮ್ಮ ಆಸ್ಪತ್ರೆಗಳಿಗೆ ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ

ಅವಶ್ಯಕವಾಗಿ ಬೇಕಾದ ಸಾಮಾನುಗಳನ್ನು, ಸಾಮಗ್ರಿಗಳನ್ನು ಕೊಡದೇ ಇರುವಂಥ ಪರಿಸ್ಥಿತಿ ಈ ಸರ್ಕಾರದಿಂದ ಆಗಿದ್ದರೆ ಇದಕ್ಕಿಂತ ಹೆಚ್ಚಿನ ನಾಚಿಕೆಗೇಡಿನ ಪ್ರಕರಣ ಬೇರೊಂದಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ. ನಾನು ಹೇಳುತ್ತಿರುವುದರಲ್ಲಿ ಏನಾದರೂ ಉತ್ಪ್ರೇಕ್ಷೆ ಇದ್ದರೆ ಮಾನ್ಯ ಮುಖ್ಯ ಮಂತ್ರಿಗಳ ವಿವರಣೆಯನ್ನು ಕೇಳಿದ ನಂತರ ಅದಕ್ಕೆ ಬೇಕಾದ ಪುರಾವೆಗಳನ್ನು ಕೊಡುವುದಕ್ಕೆ ಸಿದ್ಧ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದೇ ರೀತಿ ಇನ್ನೊಂದು ವಿಚಾರವನ್ನು ಹೇಳುವುದಾದರೆ, ಎಲ್ಲ ಕಡೆಗಳಲ್ಲೂ ನಾವು ಮಿತವ್ಯಯ ಮಾಡಬೇಕೆಂದು ಹೇಳುತ್ತೇವೆ. ಈ ಮಿತವ್ಯಯ ಎಂಬುದು ಮೊದಲು ಮನೆಯಿಂದ ಪ್ರಾರಂಭ ಆಗಬೇಕು. ಇದು ಈ ವಿಧಾನ ಸೌಧದ 3ನೇ ಮಹಡಿಯಿಂದ ಪ್ರಾರಂಭ ಆಗಬೇಕು. ಇವತ್ತು ನಮ್ಮ ಮಂತ್ರಿಗಳಿಗೆ ದೂರವಾಣಿ ಮತ್ತಿತರ ಸೌಕರ್ಯಗಳನ್ನೊದಗಿಸಿಕೊಡಲು ಎಷ್ಟು ಹಣವನ್ನು ಹೆಚ್ಚಿಗೆ ಕೊಟ್ಟಿದ್ದೇವೆಂಬುದನ್ನು ನೋಡಬೇಕು. 1993-94ರ ಸಾಲಿಗೆ ಸುಮಾರು 1.25 ಕೋಟಿ ರೂಪಾಯಿಗಳನ್ನು ಈ ಬೇಡಿಕೆಯಡಿಯಲ್ಲಿ ನಾವು ಕೊಟ್ಟಿದ್ದೇವೆಂದರೆ ಇದಕ್ಕೆ ಅರ್ಥ ಇದೆಯೇ? ಹಿಂದೆ 1993-94ರ ಸಾಲಿಗೆ ತಮಗೆ ಈ ಖರ್ಚಿಗೋಸ್ಕರ ಅಂದಾಜು ಎಷ್ಟು ಹಣಬೇಕೆಂದು ಗೊತ್ತಿರಲಿಲ್ಲವೆ? ಆ ಅಂದಾಜಿಗಿಂತ ಹೆಚ್ಚಿಗೆ ಸುಮಾರು 1.25 ಕೋಟಿ ರೂಪಾಯಿಗಳನ್ನು ಈ ಬೇಡಿಕೆಯಡಿಯಲ್ಲಿ (ಬೇಡಿಕೆ ಸಂಖ್ಯೆ : 40,41) 1 ಮತ್ತು 2ನೇ ಕಂತಿನಲ್ಲಿ ಹಣವನ್ನು ಕೇಳುತ್ತಿದ್ದೀರಿ. ಇದರ ಬಗ್ಗೆ ನಾವು ಈ ರಾಜ್ಯದ ಜನತೆಗೆ ಉತ್ತರ ಹೇಳಬೇಕು. ಕೇವಲ ನಮ್ಮ ಭಾಷಣದಲ್ಲಿ ಮಾತ್ರ ಮಿತವ್ಯಯದ ಬಗ್ಗೆ ಮಾತನಾಡಿದರೆ ಸಾಲದು. ನಮ್ಮ ಕರ್ತವ್ಯದಲ್ಲಿ ನಮ್ಮ ಕಾರ್ಯನಿರ್ವಹಣೆಯಲ್ಲಿ ನಮ್ಮ ಖರ್ಚಿನಲ್ಲಿ ಇದನ್ನು ತೋರಿಸಬೇಕಾಗುತ್ತದೆ.

6.15 ಪಿ.ಎಂ.

ಇದೇನು ದೊಡ್ಡ ಮೊತ್ತ ಅಲ್ಲವೆಂದು ತಾವು ಹೇಳಬಹುದು. ಆದರೆ ನಮ್ಮ ನಮ್ಮ ನಡವಳಿಕೆಯನ್ನು, ನಮ್ಮ ಕಾರ್ಯ ನಿರ್ವಹಣೆಯನ್ನು ಈ ದೇಶದ ಜನರಿಗೆ ಗೊತ್ತಾಗುವಂತೆ ಮಾಡಬೇಕು. ನಮ್ಮ ಮಾತಿನಲ್ಲಿ ನಮ್ಮ ನಡವಳಿಕೆಯಲ್ಲಿ ವಿಶ್ವಾಸ ಬರುವ ರೀತಿಯಲ್ಲಿ ವರ್ತನೆ ಮಾಡುವುದಾದರೆ ಅದು ನಿಜವಾದ ನೀತಿ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ಮುಖ್ಯವಾದುದೇನೆಂದರೆ, ನಾನು ಈಗಿನ ಮುಖ್ಯ ಮಂತ್ರಿಗಳು ಎಂದು ತಿಳಿದುಕೊಂಡಿದ್ದೇನೆ. ಅವರು ನಮಗೆ ಅನುದಾನ ಮಾಡಿದರು. ಇಲ್ಲಿ ಕಾಂಗ್ರೆಸ್ ಶಾಸಕರು ಇದ್ದಾರೆ. 20 ಲಕ್ಷ ರೂಪಾಯಿಗಳನ್ನು ನಮ್ಮ ನಮ್ಮ ಕ್ಷೇತ್ರದ ಅಭಭಿವೃದ್ಧಿಗೋಸ್ಕರ, ರಸ್ತೆ ಅಭಿವೃದ್ಧಿಗೋಸ್ಕರ ಕೊಡುತ್ತೇವೆಂದು ಹೇಳಿದರು. ಇದಕ್ಕೋಸ್ಕರ 40 ಕೋಟಿ ರೂಪಾಯಿಗಳ ಪೂರಕ ಅಂದಾಜನ್ನು ಇವತ್ತಿನ ದಿವಸ ತಂದಿದ್ದಾರೆ. ಆದರೆ ಈಗಾಗಲೇ ನಾವು ಫೆಬ್ರವರಿ ತಿಂಗಳಲ್ಲಿದ್ದೇವೆ. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ. ಕೇವಲ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂಬ ಮಾತನ್ನು ತಾವು ಹೇಳಿದ್ದೀರಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಹಣ ಕಳುಹಿಸಿದ್ದೇವೆ ಎಂದು ಚೀಫ್ ವಿಪ್ ಹೇಳಿದರು.

ಶ್ರೀ ಎನ್.ಜಿ ನಾಯಕ್ : ಬರೀ ಜಗಳ ಮಾಡುವುದು ಗೊತ್ತಿದೆ. ಅವರ ಕ್ಷೇತ್ರಕ್ಕೆ 20 ಲಕ್ಷ ರೂಪಾಯಿ ಬಂದಿದೆ, ಅವರು ಸುಳ್ಳು ಹೇಳುತ್ತಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ: ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವಾಗ ಆ ಹಣವನ್ನು ಖರ್ಚುಮಾಡಬೇಕು? 3 ದಿನಗಳಲ್ಲಿ ಮಾಡುತ್ತೀರಾ? ಅಥವಾ ಈ ತಿಂಗಳಲ್ಲಿ ಮಾಡುತ್ತೀರಾ? ತಮ್ಮಲ್ಲಿ ವಿನಂತಿಸುವುದೇನೆಂದರೆ, ತಾವು ಈ ಸದನದಲ್ಲಿ ಆಶ್ವಾಸನೆ ನೀಡಿದಂತೆ ಪೂರಕ ಅಂದಾಜುಗಳು ಸೇರಿದಂತೆ 40 ಕೋಟಿ ರೂಪಾಯಿಗಳ ಹಣವನ್ನು ಎಂದು ಬಿಡುಗಡೆ ಮಾಡುತ್ತೀರಿ? 20 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ಅದರಲ್ಲಿ ನನಗೆ ಗೊತ್ತಿರುವ ಹಾಗೆ, 5 ಲಕ್ಷ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿದ್ದೀರಿ. ಈ ತಿಂಗಳಲ್ಲಿ ಅಥವಾ ಇತ್ತೀಚಿನ ಎರಡು ವಾರಗಳ ಹಿಂದೆ ಮತ್ತೆ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರೇನೋ ಗೊತ್ತಿಲ್ಲ. ನನ್ನ ತಿಳಿವಳಿಕೆ ಪ್ರಕಾರ, ಇವತ್ತಿನವರೆಗೆ 5 ಲಕ್ಷ ರೂಪಾಯಿಗಳ ಕೆಲಸ ಮಾತ್ರ ನನ್ನ ಕ್ಷೇತ್ರದಲ್ಲಿ ಪ್ರಾರಂಭವಾಗಿದೆ. ಅದು ಇನ್ನೂ ಪೂರ್ಣವಾಗಿಲ್ಲ. 5 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದರೂ ಸಹ ಇವತ್ತಿನವರೆಗೆ ಅದರಲ್ಲಿ ಎಷ್ಟು ಹಣ ಖರ್ಚಾಗಿದೆ? 10 ಲಕ್ಷ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿದ್ದರೆ, ಅದನ್ನು ತಮ್ಮಿಂದ ತಿಳಿಯಬಯಸುತ್ತೇನೆ. ಎಷ್ಟೆಷ್ಟು ಹಣವನ್ನು ಯಾವ ಯಾವ ಕ್ಷೇತ್ರಗಳಲ್ಲಿ ಖರ್ಚು ಮಾಡಿದ್ದೀರೆಂಬ ಮಾಹಿತಿಯನ್ನು ಸದನಕ್ಕೆ ಒದಗಿಸಬೇಕು. ಅದರ ಮೂಲಕ ನಮ್ಮ ವಿಶ್ವಾಸವನ್ನು ಗಳಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತೀರೆಂಬ ಮಾತನ್ನು ಹೇಳುತ್ತೇನೆ. ಮತ್ತೊಂದು ಮಾತನ್ನು ಹೇಳಿದ್ದೆ. ಏನೆಂದರೆ, ನಮ್ಮಲ್ಲಿ ಒಂದು ಕೆಟ್ಟ ಪದ್ಧತಿ ಜಾರಿಗೆ ಬಂದಿದೆ. ಏನೆಂದರೆ, ಈ ದೇಶದ ಗಡಿ, ಗೋಪುರ, ಚರ್ಚ್, ಮಸೀದಿಗಳನ್ನು ಸರ್ಕಾರವೇ ದುರಸ್ತಿ ಮಾಡುವ ಕಾರ್ಯಕ್ರಮ ಏನಿದೆ ಈ ಪದ್ಧತಿಯನ್ನು ನಾವು ಮುಂದುವರಿಸಿಕೊಂಡು ಹೋಗಬೇಕೇ? ಅವಶ್ಯಕತೆ ಇದ್ದರೆ ಮಾಡಿ, ಬೇಡ ಅನ್ನುವುದಿಲ್ಲ. ಈ ದೇಶದ ಜನರಿಗೆ ದೇವರಲ್ಲಿ ವಿಶ್ವಾಸ ಇರಬೇಕು, ಚರ್ಚ್‌ಗಳಲ್ಲಿ ವಿಶ್ವಾಸ ಇರಬೇಕು, ಮಸೀದಿಗಳಲ್ಲಿ ವಿಶ್ವಾಸ ಇರಬೇಕು. ಏನು ಧರ್ಮಕ್ಕೆ ಗೌರವ ಕೊಡುತ್ತಿದ್ದಾರೆ, ನಂಬಿಕೆ ಇದೆ ಅದರಂತೆ ನಡೆದುಕೊಳ್ಳಬೇಕು. ಕೇವಲ ಸರ್ಕಾರವೇ ಮಸೀದಿ, ಚರ್ಚ್, ದೇವಸ್ಥಾನಗಳನ್ನು ದುರಸ್ತಿ ಮಾಡುವ ಕಾರ್ಯ ತೆಗೆದುಕೊಂಡರೆ ಖಂಡಿತವಾಗಿ ಅದು ಸಾಧ್ಯವಾಗುವುದಿಲ್ಲ. ಕೇವಲ ನೆಪ ಮಾತ್ರಕ್ಕೆ ಸಹಾಯ ಮಾಡಬಹುದೇ ಹೊರತು ಅದೇ ದೊಡ್ಡ ಕಾರ್ಯಕ್ರಮ ಆಗುವುದಕ್ಕೆ ಸಾಧ್ಯವಿಲ್ಲ, ಜನರಿಗೆ ದೇವರಲ್ಲಿ ವಿಶ್ವಾಸ ಬರಬೇಕು, ಧರ್ಮದಲ್ಲಿ ನಂಬಿಕೆ ಬರಬೇಕು. ಜನರೇ ಈ ಕೆಲಸ ತೆಗೆದುಕೊಳ್ಳತಕ್ಕ ರೀತಿಯಲ್ಲಿ ಆಗಬೇಕೇ ಹೊರತು ಸರ್ಕಾರ ಇದನ್ನು ಮಾಡುವುದಕ್ಕೆ ಹೊರಟರೆ ನಮ್ಮ ಕಲ್ಪನೆ ಇರತಕ್ಕ ಜಾತ್ಯಾತೀತ ರಾಷ್ಟ್ರ ಏನಿದೆ ಅದಕ್ಕೆ ಇದು ಪೂರಕವಾದ ಕಾರ್ಯಕ್ರಮವಾಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಎರಡನೇ ಕಂತು ಏನಿದೆ ಇದರಲ್ಲಿ ಕೆಲವು ಮುಖ್ಯವಾದ ಬೇಡಿಕೆಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಮುಖ್ಯವಾಗಿ ನಮ್ಮ ಅಧಿಕಾರಿಗಳಿಗೆ ನಿವೃತ್ತಿ ಆದಮೇಲೆ ಅವರಿಗೆ ಬೇಕಾದ ನಿವೃತ್ತಿ ಹಣ ಕೊಡಬೇಕು. ಆ ಹಣ ಕೊಡುವಾಗ ವಿಳಂಬವಾಗುತ್ತದೆಯಂತೆ. ಏತಕ್ಕೆ ವಿಳಂಬವಾಗಬೇಕು? ಇಂಥಿಂಥ ದಿನಗಳಲ್ಲಿ ನಿವೃತ್ತಿ ವೇತನ ಕೊಡಬೇಕೆಂದಿದ್ದರೂ ಆ ಹಣವನ್ನು ಸಕಾಲದಲ್ಲಿ ಕೊಡುವುದಿಲ್ಲ. ನಾನು ಒಂದು ಕಾನೂನು ತಂದಿದ್ದೇವೆ. ಅದೇನೆಂದರೆ, ಸಕಾಲದಲ್ಲಿ ನಿವೃತ್ತಿ ವೇತನ ಕೊಡದಿದ್ದರೆ ನಾವು ಸರ್ಕಾರದವರು ಬಡ್ಡಿ ಕೊಡಬೇಕು ಎಂದು. ಈ ರೀತಿ ಬಡ್ಡಿ ಕೊಡುವ ರೀತಿಯಲ್ಲಿ ಸರ್ಕಾರ ಏತಕ್ಕೆ ನಡೆಯಬೇಕು? ನಾನು ಹಿಂದೆಯೇ ಹೇಳಿದ್ದೆ. ಯಾವ ಒಬ್ಬ ಅಧಿಕಾರಿ ಈ ರಾಜ್ಯದಲ್ಲಿ ಸೇವೆ ಮಾಡಿ ನಿವೃತ್ತನಾಗುತ್ತಿದ್ದಾನೆ. ಅವನಿಗೆ ಕೊಡಬೇಕಾದ ಹಣವನ್ನು ಸಕಾಲದಲ್ಲಿ ಕೊಡದಂಥ ರೀತಿಯಲ್ಲಿ ಆಡಳಿತ ನಡೆಯುತ್ತಿದೆ, ಒಂದು ಪಕ್ಷ ಯಾವುದೇ ಕಾರಣಕ್ಕೆ ಕೊಡುವುದಕ್ಕಾಗದಿದ್ದರೆ ಅದನ್ನು ಪರಿಶೀಲಿಸಬೇಕು. ಉದ್ದೇಶಪೂರ್ವಕವಾಗಿ ಉದಾಸೀನದಿಂದ, ಅಧಿಕಾರಿಗಳ ತಪ್ಪಿನಿಂದ ಏನಾದರೂ ಬಡ್ಡಿ

ತೆರುವಂತೆ ಆಗಿದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲ್ಮಾಡುವಂಥ ಪ್ರವೃತ್ತಿ ಸರ್ಕಾರಕ್ಕೆ ಬಂದಾಗ ಮಾತ್ರ ಇಂಥ ಅಪವ್ಯಯವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳುತ್ತಿದ್ದರು, ನಾವು ಬಹಳ ಉದಾರಿಗಳು ಎಂದು; ಹೌದು, ನಾವು ಬಹಳ ಉದಾರಿಗಳು; ಮಹಾರಾಷ್ಟ್ರದಲ್ಲಿ ಭೂಕಂಪದಿಂದ ಸಂತ್ರಸ್ತರಾದರೆ ಅವರಿಗೆ ಹಣ ಕೊಡುತ್ತೇವೆ. ನಾನು ಕೊಡಬೇಡಿ ಎಂದು ಹೇಳುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಈ ರೀತಿ ಆದಾಗ ನಮ್ಮ ರಾಜ್ಯದಲ್ಲಿ ನೆರೆ ಹಾವಳಿಯಿಂದ ಏನಾದರೂ ಆದಾಗ ನಮ್ಮ ಪರಿಹಾರ ಕಾರ್ಯ ಏನಿದೆ ಅದಕ್ಕೆ ಆದ್ಯತೆ ಕೊಡಬೇಕು. ಮಹಾರಾಷ್ಟ್ರಕ್ಕೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಈ ರಾಜ್ಯದ ಜನತೆ ಯಾರಿದ್ದಾರೆ, ಯಾರು ನಮಗೆ ತೆರಿಗೆ ಕೊಡುತ್ತಿದ್ದಾರೆ ಅವರಿಗೆ ಏನಾದರೂ ಕಷ್ಟವಾದರೆ ಅವರ ನೆರವಿಗೆ ಹೋಗಬೇಕೇ ಹೊರತು ಬೇರೆ ರಾಜ್ಯದಲ್ಲಿ ಆಯಿತು ಎಂಬ ಕಾರಣಕ್ಕೋಸ್ಕರ ಹಣ ಕೊಡುವುದಕ್ಕೆ ಸರ್ಕಾರ ಏನು ನಿರ್ಧಾರ ತೆಗೆದುಕೊಂಡಿದೆ. ಅದು ಎಷ್ಟರಮಟ್ಟಿಗೆ ಸರಿ ಎಂದು ಅವರೇ ಹೇಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಒಂದು ವಿಚಾರವನ್ನು ನಾನು ನಿನ್ನೆಯ ದಿವಸವೇ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಇವತ್ತಿನ ದಿವಸ ರಾಜ್ಯದ ಎಕ್ಸೈಜ್ ಇಲಾಖೆಗೆ ಸಂಬಂಧಪಟ್ಟಂತೆ ಈ 7 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. 7 ಕೋಟಿ ರೂಪಾಯಿಗಳನ್ನು ಏತಕ್ಕೋಸ್ಕರ ಖರ್ಚು ಮಾಡುತ್ತಿದ್ದೇವೆ? ಮುಖ್ಯ ಮಂತ್ರಿಗಳು ನಿನ್ನೆ ದಿವಸ ಈ ವಿಚಾರವಾಗಿ ಪ್ರಾಸ್ತಾವಿಕವಾಗಿ ಕೆಲವು ಮಾತುಗಳನ್ನು ಹೇಳಿದರು. ಅದಕ್ಕೆ ನಾನು ಈಗ ಪೂರಕವಾಗಿ ಹೇಳುತ್ತಿದ್ದೇನೆ.

ಈ ದೇಶದಲ್ಲಿ ಮೊಲ್ಯಾಸಿಸ್ ಕಂಟ್ರೋಲ್ ಆರ್ಡರ್ ಎಂಬುದು ಇತ್ತು. ಇದನ್ನು ಡೀ-ಕಂಟ್ರೋಲ್ ಮಾಡಿದರು. ರಾಜ್ಯದ ಪರವಾಗಿ ಮುಖ್ಯ ಮಂತ್ರಿಗಳು ಸರ್ಕಾರದ ಅಧಿಕಾರಿಗಳು ಇದನ್ನು ತೀವ್ರವಾಗಿ ವಿರೋಧಿಸಿದ್ದಾರೆಂಬುದು ನನ್ನ ಗಮನಕ್ಕೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಂದರ್ಭಗಳ ಈ ರಾಜ್ಯದ ಆಡಳಿತದ ಮೇಲೆ ಯಾವುದೇ ವಲಯದ ಪ್ರಭಾವ ಇರಬಾರದು ಎಂದು ಹೇಳುತ್ತಿದ್ದಾರೆ. ಅಬ್ಕಾರಿ ವಲಯದ ಪ್ರಭಾವ ಏನಿದೆ ಅದು ಈ ರಾಜ್ಯದ ಆಡಳಿತದ ಮೇಲೆ ಇರಬಾರದು. ಅದರ ಫಲ ಅವರಿಗೆ ಸಿಗದಂತ ರೀತಿಯಲ್ಲಿ ನಮ್ಮ ಆಡಳಿತ ಇರಬೇಕು ಜನರ ಹಿತಕ್ಕೋಸ್ಕರ ಇರಬೇಕೆಂಬ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಖಂಡಿತ ಒಪ್ಪುತ್ತೇನೆ. ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಇವತ್ತು ಡೀ-ಕಂಟ್ರೋಲ್ ಆರ್ಡರ್ ಮಾಡಿದರಲ್ಲ ಕೇಂದ್ರ ಸರ್ಕಾರದವರು, ಇದು ಯಾರ ಪರವಾಗಿ? ನಾನು ಯಾರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಪ್ರಧಾನ ಮಂತ್ರಿಯವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೇಂದ್ರದ ಮಂತ್ರಿಮಂಡಲದ ಸದಸ್ಯರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೇಂದ್ರ ಸರ್ಕಾರದ ಕ್ರಮ ಏನಿದೆ. ಡೀ-ಕಂಟ್ರೋಲ್ ಆರ್ಡರ್ ಮೊಲ್ಯಾಸಿಸ್ ಬಗ್ಗೆ ಮಾಡಿದ್ದು ಯಾರ ಪರವಾಗಿ?

ಶ್ರೀ ಎಂ. ವೀರಪ್ಪ ಮೊಯಿಲಿ: ರೈತರ ಪರವಾಗಿ ಆದಂತ ತೀರ್ಮಾನ, ಬಾಬಾಗೌಡರನ್ನು ಬೇಕಾದರೆ ಕೇಳಿ.

ಶ್ರೀ ಹೆಚ್. ಏಕಾಂತಯ್ಯ: ಇದು ರೈತರ ಪರವಾಗಿ ಆಗಿರತಕ್ಕ ತೀರ್ಮಾನವೆಂದು ಮಾನ್ಯ ಬಾಬಾಗೌಡರು ಪೂರ್ಣವಾಗಿ ಒಪ್ಪುವುದಿಲ್ಲ. ನಾನು ರೈತನಾಗಿ ಕಬ್ಬು ಬೆಳೆದಿದ್ದೇನೆ. ಮೊಲ್ಯಾಸಿಸ್ಗೆ ಬೆಲೆ ಬಂದರೆ ಬೇಡ ಅನ್ನುವುದಿಲ್ಲ. ರೈತರ ಹೆಸರಿನಲ್ಲಿ ಮೊಲ್ಯಾಸಿಸ್ನಿಂದ ಮಧ್ಯಸಾರ ತಯಾರುಮಾಡುತ್ತಿದ್ದಾರೆ, ರೆಕ್ಟಿಫೈಡ್ ಸ್ಪಿರಿಟ್ ತಯಾರು ಮಾಡುತ್ತಿದ್ದಾರೆ. ಆ ಒಂದು ವಲಯದ ಪ್ರಭಾವಕ್ಕೆ ಒಳಗಾಗಿ ಈ ಆದೇಶ ಆಗಿದೆಯೇ ಹೊರತು ಕೇವಲ ರೈತರ ಉದ್ಧಾರಕ್ಕೋಸ್ಕರ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ನಿಮ್ಮ ಪಕ್ಷದ ಬಣ್ಣ ಬಯಲಾಗುತ್ತಿದೆ. ನೀವು ರೈತರ ಪರವಾಗಿದ್ದೀರೋ ಅಥವಾ ವಿರೋಧವಾಗಿದ್ದೀರೋ? ನಾನು ನಿನ್ನೆ ಹೇಳಿದೆ, ತಾವು ರೈತರ ಪರವಾಗಿ ಎಷ್ಟು ಕೆಲಸ ಮಾಡುತ್ತೀರಿ ಎಂದು. ಇಡೀ ದೇಶಕ್ಕೆ ದೇಶವೇ ಡೀ-ಕಂಟ್ರೋಲ್ ಆಫ್ ಮೊಲ್ಯಾಸಿಸ್ ಆಗಬೇಕೆಂದು ಹೇಳುತ್ತಿತ್ತು. ಇಡೀ ರೈತ ಸಮುದಾಯ ಅನೇಕ ವರ್ಷಗಳ ಕಾಲದಿಂದ ಡಿಮ್ಯಾಂಡ್ ಮಾಡುತ್ತಿತ್ತು. ಇವತ್ತು ನಮಗೆ, ನಮ್ಮ ರಾಜ್ಯ ಸರ್ಕಾರದ ಸಂಪನ್ಮೂಲಕ್ಕೆ ಧಕ್ಕೆ ಬಂದಿರಬಹುದು. ಆದರೆ ಇಡೀ ರೈತ ಸಮುದಾಯ ಇದನ್ನು ಸ್ವಾಗತಿಸಬಹುದು. ಸಹಕಾರ ಸಕ್ಕರೆ ಕಾರ್ಖಾನೆಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವುದಕ್ಕೆ ಇದರಿಂದ ಸಾಧ್ಯವಾಗಿದೆ. ರೈತರಿಗೆ ಕಬ್ಬಿಗೆ ಹೆಚ್ಚಿನ ಬೆಲೆ ಕೊಡುವುದಕ್ಕೆ ರಾಷ್ಟ್ರ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಸಾಧ್ಯವಾಗಿದೆ. ಇದಕ್ಕೆ ತಾವು ರಾಜಕೀಯ ಮೋಟೀವ್ ಇಟ್ಟುಕೊಂಡು ರಾಜಕೀಯದ ಬೇಳೆ ಬೇಯಿಸುವುದಕ್ಕೆ ಪ್ರಯತ್ನ ಮಾಡಿದರೆ ರೈತರು ಇದಕ್ಕೆ ಉತ್ತರ ಕೊಡುತ್ತಾರೆ. Therefore this allegations is totally unwarranted politically motivated and malicious.

ಶ್ರೀ ಹೆಚ್. ಏಕಾಂತಯ್ಯ: ಮುಖ್ಯ ಮಂತ್ರಿಗಳು ಬಹಳ ಖಾರವಾದ ಮಾತನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾಳೆ ನಮ್ಮ ಚರ್ಚೆಗೆ ಉತ್ತರ ಕೊಡಬೇಕಾದರೆ ರೈತರ ಬಗ್ಗೆ ಎಷ್ಟು ಕಳಕಳಿ ಇದೆ ಎಂದು ನೋಡೋಣ. ನಾವು ನಾಳೆಯವರೆಗೆ ಕಾಯುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ: ರೈತರ ವಿರುದ್ಧವಾಗಿ ಮಾತನಾಡುತ್ತಿದ್ದೀರೆಂದು ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ತಮ್ಮ ಟೀಕೆಗೆ ಯಾವುದೇ ಆಧಾರವಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ಆಧಾರ ಕೊಡುವವರೆಗೆ ತಾಳಿ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಆಧಾರ ಕೊಡಿ. I am sorry, this cannot go on record. ಇದು ನಾವು ಮಾಡಿದಂತಹ ನಿರ್ಣಯ ಅಲ್ಲ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ನಿರ್ಣಯ. ಈ ಸದನದಲ್ಲಿ ಈ ವಿಚಾರಗಳ ಬಗ್ಗೆ ಅಲಿಗೇಷನ್ ಮಾಡಬೇಕಾದರೆ he has to substantiate.. party is not before this House.

ಇಲ್ಲಿ ಯಾರೂ ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ.

Sri R.V. Deshpande: Please allow him to speak.

ಶ್ರೀ ಹೆಚ್. ಏಕಾಂತಯ್ಯ : ಈ ರೀತಿ ಮುಖ್ಯ ಮಂತ್ರಿಗಳು ಮಾತನಾಡುವುದಾದರೆ ಬೇರೆಯವರ ಪರ ವಕಾಲತ್ತು ವಹಿಸುತ್ತಿದ್ದಾರೆಂದು ಆಯಿತು. ನಾನು ಏನು ಆರೋಪ ಮಾಡಿದ್ದೇವೆಂದು ಹೇಳುವುದಾದರೆ, ಈ ಮಾತನ್ನು ನಾನು ಇಲ್ಲಿಗೇ ಬಿಡಲಿಕ್ಕೆ ತಯಾರಿಲ್ಲ. ಇನ್ನೂ ಮುಂದೆ ಹೋಗುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಪಾರ್ಲಿಮೆಂಟಿನಲ್ಲಿ ತಮ್ಮ ಸದಸ್ಯರು ಇದ್ದರು. I have not heard even single allegation against it.

ತಮ್ಮ ಬುದ್ಧಿವಂತಿಕೆಯನ್ನು ಮೆಚ್ಚಬೇಕು. For this kind of investigation to make allegations- allegations must be based on sum and substance. In Parliament they have hailed this decision. This decision absolutely in favour

of the farmers. ಎಂದು ಪಾರ್ಲಿಮೆಂಟ್ನಲ್ಲಿ ಎಲ್ಲರೂ ಹೊಗಳಿದ್ದಾರೆ. ತಮ್ಮ ಪಕ್ಷದ ಜನತಾದಳದ ಸದಸ್ಯರು ಅಲ್ಲಿದ್ದರು, ಯಾರಾದರೂ ಇದನ್ನು ಟೀಕೆ ಮಾಡಿದ್ದಾರೆಯೇ ಯಾರು ಟೀಕೆ ಮಾಡಿದ್ದಾರೆ? ತಾವು ಟೀಕೆ ಮಾಡಬೇಕೆಂದು ದಯಮಾಡಿ ಟೀಕೆ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಏಕಾಂತಯ್ಯನವರೇ, ದಯಮಾಡಿ ಇದರ ಬಗ್ಗೆ ವಿಚಾರ ಮಾಡಿ. ಕೇಂದ್ರದಲ್ಲಿ ಜನತಾದಳದ ಎಂಪಿಗಳೂ ಕೂಡ ಅಲ್ಲಿದ್ದರು. ಕೇಂದ್ರಸರ್ಕಾರದ ಧೋರಣೆಯ ಬಗ್ಗೆ ಯಾರಾದರೂ ಟೀಕೆ ಮಾಡಿದ್ದಾರೆಯೆ?

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಮಾತಿನಲ್ಲಿ ಹುರುಳಿಲ್ಲ. ನಾನು ಯಾರ ವಿರುದ್ಧವಾಗಿಯೂ ಆರೋಪ ಮಾಡಲಿಲ್ಲ. ಯಾವ ಒಂದು ನೀತಿಯ ಪರಿಣಾಮವಾಗಿ ಈ ದೇಶದ ಜನರಿಗೆ, ಮುಖ್ಯವಾಗಿ ಕೆಲವು ಹಿತಾಸಕ್ತಿಗಳು ಏನಿವೆ, ಆ ಹಿತಾಸಕ್ತಿಗಳಿಗೆ ಲಾಭವಾಗಿದೆ ಎನ್ನುವ ಮಾತನ್ನು ಹೇಳಿದ್ದೇನೆ. 114 ರೂಪಾಯಿ ಮೆಟ್ರಿಕ್ಟನ್ ಬೆಲೆ ಮೊದಲು ಇತ್ತು. ಅದು ನನಗೆ ಗೊತ್ತಿದೆ. ಇವತ್ತಿನ ದಿವಸ ಎರಡು ಸಾವಿರ ರೂಪಾಯಿ ಮೆಟ್ರಿಕ್ಟನ್ನ ಬೆಲೆಯಾಗುವಷ್ಟು ಇವತ್ತು ಮೊಲಾಸಿಸ್ನ ಬೆಲೆಯಾಗಿದೆ. ಅದರ ಉಪಯೋಗ ಈ ದೇಶದ ರೈತನಿಗೆ ಆಗುವುದಾದರೆ, ನಾನು ಅದಕ್ಕೆ ವಿರೋಧಿಯಲ್ಲ. ನಾನು ತಮ್ಮಿಂದ ತಿಳಿಯಬಯಸುತ್ತೇನೆ, ಮೊದಲು 114 ರೂಪಾಯಿ ಮೆಟ್ರಿಕ್ಟನ್ನ ಬೆಲೆ ಇತ್ತು. ಇವತ್ತು 2500 ರೂಪಾಯಿ ಮೆಟ್ರಿಕ್ ಟನ್ ಬೆಲೆಯಾಗಿದೆ ಅದರ ಸರಿಸಮಾನವಾಗಿ ಏನಾದರೂ ಈ ದೇಶದ ರೈತನಿಗೆ ಲಾಭವಾಗಿದ್ದರೆ ನಾನು ಈ ಸದನದ ಸದಸ್ಯತ್ವಕ್ಕೆ ರಾಜಿನಾಮೆಯನ್ನು ಕೊಟ್ಟು ಹೊರಗೆ ಹೋಗುತ್ತೇನೆ. ನಾನು ಚಾಲೆಂಜ್ ಮಾಡುತ್ತೇನೆ, ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ಮೊಲಾಸಸ್ನ ಬೆಲೆ ಮೊದಲು ಒಂದು ಮೆಟ್ರಿಕ್ಟನ್ಗೆ 114 ರೂಪಾಯಿ ಇತ್ತು, ಇವತ್ತಿನ ದಿವಸ 2500 ರೂಪಾಯಿಗಳಿಗೆ ಏನು ಹೋಗಿದೆ, ಅದರ ಪೂರ್ಣ ಲಾಭ ಏನಾದರೂ ರೈತನಿಗೆ ಪ್ರಯೋಜನವಾಗಿದೆಯೆಂದು ಸಾಬೀತು ಮಾಡುವುದಾದರೆ ನಾನು ಈ ಸಭೆಯಿಂದ ನಿರ್ಗಮಿಸುತ್ತೇನೆಂದು ಛಾಲೆಂಜ್ ಮಾಡುತ್ತೇನೆ. ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಇದರ ಪೂರ್ಣ ಲಾಭ ಏನಾದರೂ ರೈತನಿಗೆ ಆಗಿದೆಯೆಂದು ಪುನಃ ಏನಾದರೂ ಹೇಳುವುದಾದರೆ ಅದನ್ನು ರುಜುವಾತು ಮಾಡುವುದಾದರೆ ಅದನ್ನು ಸಭೆಯ ಮುಂದಿಡಿ, ನಾನು ಇವತ್ತೇ ರಾಜೀನಾಮೆಯನ್ನು ಕೊಟ್ಟು ಹೊರಗೆ ಹೋಗುತ್ತೇನೆ. ಇಲ್ಲದಿದ್ದರೆ ಅವರು ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತಾರೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾಗಿ ನಾನು ಯಾರ ವಿರುದ್ಧವಾಗಿ ಆರೋಪ ಮಾಡುವುದಕ್ಕೆ ಈ ಮಾತನ್ನು ಹೇಳುತ್ತಿಲ್ಲ. ನಾನು ರೈತ ವಿರೋಧಿಯಲ್ಲ.

Sri. M. Veerappa Moily: This House cannot be used for attributing malafide motives against the Central Government.

Sri. H. Ekanthaiah: I have not at all attributed any malafides..

ಶ್ರೀ ಆರ್. ವಿ. ದೇಶಪಾಂಡೆ: ಅವರು ಅಲಿಗೇಷನ್ ಮಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ, ಇವತ್ತಿನ ದಿವಸ ತಮಗೆ ಏನಾಗುತ್ತಿದೆ ಅಂದರೆ, ತಮ್ಮ ಕನಸು ಮನಸ್ಸಿನಲ್ಲಿ ನಿಮ್ಮ ದೇವರು ನರಸಿಂಹರಾಯರು. ಅವರು ಯಾರ ಹೆಸರು ಸಹ ಹೇಳಲಿಲ್ಲ, ಕೇಂದ್ರ ಸರ್ಕಾರದ ಪಾಲಿಸಿಯ ಬಗ್ಗೆ ಅವರು ಹೇಳಿದರು. ಪಾಲಿಸಿಯ ಬಗ್ಗೆ ಇಲ್ಲಿ ಡಿಸ್ಕಷನ್ ಮಾಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಈಲ್ಡ್ ಆಗುವುದು ಇದ್ದರೆ, ಅವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಏನು ಹೇಳಿದರು ಎಂದರೆ, ಈ ನಿರ್ಣಯ ತೆಗೆದುಕೊಳ್ಳುವಾಗ ಅನೇಕ ಹಿತಾಸಕ್ತಿಗಳ ಪ್ರಭಾವಕ್ಕೆ ಒಳಗಾಗಿ ಈ ನಿರ್ಣಯವನ್ನು

ತೆಗೆದುಕೊಂಡಿದ್ದಾರೆ, ಆ ಹಿತಾಸಕ್ತಿಗಳಿಗೆ ಲಾಭವಾಗುವಂತಹ ಉದ್ದೇಶದಿಂದ ಮಾಡಿದ್ದಾರೆ ಎಂದು ; is it not a allegations made with malafide intention....

Sri. H. Ekanthaiah : I will prove it...

Sri. M. Veerappa Moily : You prove it at the appropriate forum. Don't misuse this forum. This is not the forum...

ಶ್ರೀ ಹೆಚ್. ಏಕಾಂತಯ್ಯ: ತಾವು ಮಿಸ್ಯೂಸ್ ಮಾಡುತ್ತಾ ಇದ್ದೀರಿ. ನಾನು ಮಾಡುತ್ತಿಲ್ಲ. ಈ ದೇಶದ ಹಾಗೂ ಈ ರಾಜ್ಯದ ರೈತನಿಗೆ ಇದರಿಂದ ನಷ್ಟವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ನಿಂತಿದ್ದೇನೆಯೇ ಹೊರತಾಗಿ ನಾನು ಯಾರ ವಿರುದ್ಧವಾಗಿಯೂ ಆರೋಪ ಮಾಡಲಿಕ್ಕೆ ನಿಂತಿಲ್ಲ. ಆ ಕೆಲಸವನ್ನು ಮಾಡಲಿಕ್ಕೆ ಸಾರ್ವಜನಿಕ ಸಭೆಗಳು ಇವೆ. ಬೇಕಾದರೆ ಸಾರ್ವಜನಿಕ ಸಭೆಗಳಲ್ಲಿ ಹೇಳುತ್ತೇನೆ. ನಾನು ಈ ಸದನವನ್ನು ಆ ರೀತಿ ಉಪಯೋಗಿಸಿಕೊಳ್ಳುವುದಕ್ಕೆ ತಯಾರಾಗಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ನಾನು ಹೇಳುವುದು ಇಷ್ಟೆ, ಈ ಡೀಕಂಟ್ರೋಲ್ ಆರ್ಡರ್ನಿಂದ...

ಶ್ರೀ ಎಂ. ವೀರಪ್ಪ ಮೊಯಿಲಿ: ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಏಕಾಂತಯ್ಯನವರು ಹಿರಿಯ ಸದಸ್ಯರು. I would not have objected to it. Sir, you may kindly observe how he has develped the points. He has mentioned I don't know whether this decision taken by the Prime Minister. I have been observing very closely. You have said that ....

(ಗೊಂದಲ)

ಶ್ರೀ ಸಿ. ಬೈರೇಗೌಡ: ನಾನು ಯಾರ ಹೆಸರನ್ನು ಹೇಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ನಾವು ವಿರೋಧಪಕ್ಷದಲ್ಲಿರುವುದಕ್ಕೆ ಜನ ಓಟು ಕೊಟ್ಟಿದ್ದಾರೆ. ಸರ್ಕಾರ ಒಳ್ಳೆಯ ಕೆಲಸ ಮಾಡಿದಾಗ ಒಳ್ಳೆಯದೆಂದು ಹೇಳುತ್ತೇವೆ. ಸರ್ಕಾರ ಒಳ್ಳೆಯ ಕೆಲಸ ಮಾಡದಿದ್ದರೆ ಟೀಕೆ ಮಾಡುವುದು ನಮ್ಮ ಕರ್ತವ್ಯವಿದೆ. ನಾವು ಟೀಕೆ ಟಿಪ್ಪಣಿ ಮಾಡುವ ಅಧಿಕಾರವನ್ನು ಯಾರಿಗೂ ಸಹ ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಏಕಾಂತಯ್ಯನವರು ಮಾತನಾಡುವಾಗ ಪ್ರಧಾನಮಂತ್ರಿಗಳು ಹೆಸರು ಹೇಳಲಿಲ್ಲ, ಯಾರ ಹೆಸರೂ ಹೇಳಲಿಲ್ಲ. ತಾವು ಬೇಕಾದರೆ ನೋಡಿ, ಕೇಂದ್ರ ಸರ್ಕಾರ ಎಂದು ಹೇಳಿದ್ದಾರೆ. ನಿಮ್ಮ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ, ನಿಲುವಳಿ ಸೂಚನೆಯ ಮುಖಾಂತರ ಟೀಕೆ ಮಾಡುವುದಕ್ಕೆ ಬರುವುದಿಲ್ಲರೆಂದರೆ ನಾವೇನು ಮಾಡುವುದಕ್ಕೆ ಸಾಧ್ಯವಿದೆ? ನಾವು ಇಲ್ಲಿ ಹೊಗಳಿಲಿಕ್ಕೆ ಇರಬೇಕಾಗುತ್ತದೆ ಏನು? ಅವರ ಕರ್ತವ್ಯ ಅವರು ಮಾಡುತ್ತಿದ್ದಾರೆ, ನಮ್ಮ ಕರ್ತವ್ಯ ನಾವು ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಮಾಧಾನದಿಂದ ಕೇಳಬೇಕು ಉತ್ತರ ಕೊಡುವುದಕ್ಕೆ ತಮಗೆ ಅವಕಾಶವಿದೆ. ತಾವು ಆಗ ಉತ್ತರ ಕೊಡಿ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಉಪಾಧ್ಯಕ್ಷರೆ, ಸಂಪನ್ಮೂಲದ ಕ್ರೋಢೀಕರಣಕ್ಕೆ ತೊಂದರೆಯಾಗಿದೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳಿದ್ದೇನೆ. ಆ ಮಾತನ್ನು ನಾನು ಒಪ್ಪುತ್ತೇನೆಂದು ಹೇಳಿದ್ದೇನೆ. ನಾನು ಮಾತನಾಡುವಾಗ ಯಾರ ಹೆಸರನ್ನೂ ಹೇಳಲಿಲ್ಲ, ಪ್ರಧಾನಮಂತ್ರಿಗಳ ಹೆಸರನ್ನೂ ಹೇಳಲಿಲ್ಲ, ಕೇಂದ್ರ ಸರ್ಕಾರದ ನೀತಿಯಿಂದ

ರಾಜ್ಯ ಸರ್ಕಾರದ ಸಂಪನ್ಮೂಲಕ್ಕೆ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳಿದ್ದೇನೆ. ನಾನು ಶಾಸನಸಭೆಯಲ್ಲಿ ಶಾಸಕನಾಗಿ ಕೆಲಸ ಮಾಡುವಾಗ ಕೆಲವೊಂದು ನೀತಿನಿಯಮಗಳನ್ನು ಇಟ್ಟುಕೊಂಡಿದ್ದೇನೆ. ನಾನು ಯಾವುದೇ ವಲಯದಿಂದ ಹಣವನ್ನು ತೆಗೆದುಕೊಂಡಿಲ್ಲ. ಯಾರ ಪರವಾಗಿಯೂ ಮಾತನಾಡುವುದಕ್ಕೆ ಬಂದಿಲ್ಲ. ಯಾರ ಪರವಾಗಿ ಅಥವಾ ವಿರುದ್ಧವಾಗಿ ಪ್ರಚಾರ ಮಾಡುವುದಕ್ಕೆ ನಾನು ಇಲ್ಲಿಗೆ ಬಂದಿಲ್ಲ. ನಾನು ಶಾಸಕನಾಗಿ ನನ್ನ ಮಕ್ಕಳ ಮದುವೆಗೆ ಅಧಿಕಾರಿಗಳಿಂದ ಹಣವನ್ನು ತೆಗೆದುಕೊಂಡಂತಹ ಶಾಸಕ ನಾನಲ್ಲ. ಅಂತಹ ಪ್ರವೃತ್ತಿಯವನು ನಾನಲ್ಲ. ಅಧಿಕಾರಿಗಳಿಂದ ಹಣವನ್ನು ತೆಗೆದುಕೊಂಡು ಮಕ್ಕಳ ಮದುವೆ ಮಾಡುವಂತಹ ಪ್ರವೃತ್ತಿಯವನು ನಾನಲ್ಲ. ಇವತ್ತಿನ ದಿವಸ ಆ ರೀತಿಯಾಗಿ ನಮ್ಮನ್ನು ನೀವು ಟೀಕೆ ಮಾಡುವುದಾದರೆ ಅಂತಹ ಟೀಕೆಗೆ ಇಲ್ಲಿ ಅವಕಾಶವಿಲ್ಲ. ಕೇವಲ ಹೊಗಳುಭಟ್ಟರಿಗೆ ಮಾತ್ರ ಯಾರು ಸರ್ಕಾರದಲ್ಲಿ ಶಾಮೀಲಾಗುತ್ತಾರೆ ಅವರಿಗೆ ಮಾತ್ರ ಮಾತನಾಡುವ ಅವಕಾಶವಿದೆಯೆಂದು ಹೇಳುವುದಾದರೆ....

ಶ್ರೀ ಸಿ.ಆರ್ ಸಗೀರ್ ಅಹ್ಮದ್ (ಸಣ್ಣ ಕೈಗಾರಿಕಾ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಶಾಸಕರು ಮಕ್ಕಳ ಮದುವೆಗೆ ಹಣ ಸಂಗ್ರಹಿಸುತ್ತಾರೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಹಿರಂಗವಾಗಿ ಯಾರೆಂದು ಇರುವಂತಹ ವಿಚಾರವನ್ನು ಹೇಳಲಿ.

ಶ್ರೀ ಹೆಚ್. ಏಕಾಂತಯ್ಯ: ನಾನು ಇನ್ನೂ ಮುಂದೆ ಹೋಗಬೇಕಾಗುತ್ತದೆ. ಮಾನ ಮರ್ಯಾದೆಯನ್ನು ಬೀದಿಗೆ ಇಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಸಗೀರ್ ಅಹ್ಮದ್ರವರೆ, ನಿಮ್ಮ ಮಗಳ ಮದುವೆ ಆಯಿತೆ?

ಶ್ರೀ ಸಿ.ಆರ್. ಸಗೀರ್ ಅಹ್ಮದ್: ಸದಸ್ಯರು ಯಾರೆಂದು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಏಕಾಂತಯ್ಯನವರೇ, ಇವತ್ತು ಏಕೆ ಏನು?

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಕ್ಷಮಿಸಿ, ನನ್ನ ಭಾಷಣವನ್ನು ಕೇಳುವುದಕ್ಕೆ ತಯಾರಾಗಿಲ್ಲದಿದ್ದರೆ ನಮ್ಮ ಟೀಕೆಗಳನ್ನು ಅಲ್ಲಗಳೆದು ಅವುಗಳನ್ನು ಪರಿಶೀಲನೆ ಮಾಡಲಿಕ್ಕೆ ತಯಾರಾಗಿಲ್ಲವೆಂದರೆ ನಾನು ಶಾಸನಸಭೆಯಲ್ಲಿ ಖಂಡಿತವಾಗಿಯೂ ಮಾತನಾಡುವುದಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ನನ್ನದೇ ಆದಂತಹ ಕಾರ್ಯಚಟುವಟಿಕೆಗಳಿವೆ. ನಿಮಗೂ ನಿಮ್ಮ ಅಧ್ಯಕ್ಷರಿಗೂ ನಮಸ್ಕಾರ, ನೀವೇ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ: ಆಯಿತು, ತಮಗೂ ನಮಸ್ಕಾರ, I am Sorry Hon'ble Member should be asked to restrain from making such remarks.

ಶ್ರೀ ಹೆಚ್. ಏಕಾಂತಯ್ಯ: ನಾನು ಯಾರ ಮೇಲೂ ಆಪಾದನೆ ಮಾಡಲಿಲ್ಲ. ನಾನು ಯಾವ ಸದಸ್ಯರ ಮೇಲೂ ಏನೂ ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾತಿನಲ್ಲಿ ಸ್ವಲ್ಪ ಸಂಯಮವನ್ನು ಸದಸ್ಯರು ಇಟ್ಟುಕೊಳ್ಳದಿದ್ದರೆ ಇಂತಹ ವಾತಾವರಣ ಉದ್ಭವವಾಗುತ್ತದೆ. ತಾವು ಮಾತನಾಡಲಿಲ್ಲವೆಂದು ಹೇಳುತ್ತೀರಿ. ಪುನಃ ಹೇಳಿದರು ಶಾಸಕರು ಮಕ್ಕಳ ಮದುವೆಗೆ ಹಣ ಸಂಗ್ರಹ ಮಾಡಲಿಲ್ಲವೆಂದು You have no right to make such a sweeping remarks, such allegations against Members... It will reflect on all Members. You are also a Member.

Sri H. Ekanthaiah : I know the responsibility ನಾನು ಏನು ಹೇಳಿದೆ? ನಾನು ಯಾವ ವಲಯದ ಪರವಾಗಿ ಮಾತನಾಡಲಿಕ್ಕೆ ಬಂದಿಲ್ಲವೆಂದು ಹೇಳಿದೆ.

Sri M. Veerappa Moily : You have no right to make such a sweeping allegations on the community of the Legislators...

ಶ್ರೀ ಹೆಚ್. ಏಕಾಂತಯ್ಯ: ಇವತ್ತಿನ ದಿವಸ ಹೇಳುತ್ತಾ ಇದ್ದೀರಿ ಯಾರನ್ನು ಟೀಕೆ ಮಾಡಬಾರದೆಂದು. ನಾನು ಶಾಮೀಲಾಗಿ ಶಾಸಕನಾಗಿ ಕೆಲಸ ಮಾಡುವುದಕ್ಕೆ ಬಂದಿಲ್ಲ. ತಮ್ಮದೇ ಆದಂತಹ ರೀತಿಯಲ್ಲಿ ತಾವು ತಮ್ಮ ಕರ್ತವ್ಯ ನಿರ್ವಹಣೆ ಮಾಡಿ. ನಮ್ಮ ಕೈಯಲ್ಲಿ ಅದು ಆಗುವುದಿಲ್ಲ ನಾವು ಸುಮ್ಮನೆ ಇರುತ್ತೇವೆ. ಅದಕ್ಕೆ ತಮ್ಮದೇನು ತಕರಾರು ಇಲ್ಲ.

Sri M. Veerappa Moily : You have no right to make such a allegation.

Sri R.V. Deshpande : Where is the allegation. No allegation is there. ನಾನು ಅಲಿಗೇಷನ್ ಮಾಡಲಿಲ್ಲವೆಂದು ಹೇಳಿದರು. ಯಾರ ಮೇಲೆ ಅವರು ಅಲಿಗೇಷನ್ ಮಾಡಿದ್ದಾರೆ?

ಉಪಾಧ್ಯಕ್ಷರು: ಮಾನ್ಯ ಏಕಾಂತಯ್ಯನವರು ಮದುವೆ ಮುಂಜಿ ಎಂದು ಹೇಳಿದರು. ಯಾರು ನಿಮ್ಮ ಮೇಲೂ ಅಲಿಗೇಷನ್ ಮಾಡಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ನಾನು ನನ್ನ ಕರ್ತವ್ಯವನ್ನು ಮಾಡುವ ದೃಷ್ಟಿಯಿಂದ ನಾನು ಕೆಲವು ಮಾತುಗಳನ್ನು ಹೇಳಿದ್ದೇನೆಯೇ ಹೊರತಾಗಿ ವೈಯಕ್ತಿಕವಾಗಿ ಯಾರ ಮೇಲೂ ಅಲ್ಲ. ನಾವು ಇಲ್ಲಿ ಜಗಳವಾಡುವುದಕ್ಕೆ ಬಂದಿದ್ದೇವೆಯೇ?

ಉಪಾಧ್ಯಕ್ಷರು: ಮಾನ್ಯ ಏಕಾಂತಯ್ಯನವರೆ, ತಾವು ಏನು ಹೇಳುತ್ತಾ ಇದ್ದೀರಿ ಅಂದರೆ ನನ್ನ ಮಗಳ ಮದುವೆಗೆ ಅಥವಾ ಮುಂಜಿಗೆ ಯಾರಿಂದ ನಾನು ಹಣ ಪಡೆದಿಲ್ಲವೆಂದರೆ ಅದರ ಅರ್ಥ ಇನ್ನೊಬ್ಬರಿಗೆ ಹೇಳುವ ದೃಷ್ಟಿಯಿಂದ ಹೇಳಬಹುದು. ದಯಮಾಡಿ ವಿಷಯಾಂತರವಾಗುವುದು ಬೇಡ, ದಯಮಾಡಿ ನಿಮ್ಮ ಚರ್ಚೆಯನ್ನು ಮುಂದುವರೆಸಿ.

ಶ್ರೀ ಹೆಚ್. ಏಕಾಂತಯ್ಯ: ಈ ರೀತಿಯಾಗಿ ಗೊಂದಲವಾಗುವುದಾದರೆ ಪ್ರತಿಯೊಂದು ಮಾತಿಗೂ ಸಹ ತಮ್ಮ ಆಕ್ಷೇಪಣೆ ಇದೆಯೆಂದು ಹೇಳುವುದಾದರೆ ಯಾವುದನ್ನು ಟೀಕಾತ್ಮಕವಾಗಿ ತೆಗೆದುಕೊಳ್ಳಬೇಕು? ಸರ್ಕಾರದಲ್ಲಿ ಅವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಇಲ್ಲವೆಂದು ಅಲ್ಲ, ಅವರಿಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ. ಅದನ್ನು ಕೇಳುವ ಅಧಿಕಾರ ನಮಗೆ ಇಲ್ಲವೆ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸದಸ್ಯರು ಹೇಳುವ ಮಾತಿನಲ್ಲಿ, ಶಾಸನ ಸಭೆಯಲ್ಲಿ ಅಂತಹವರೂ ಇದ್ದಾರೆ ಎಂಬಂತಾಗುತ್ತದೆ. ದಯಮಾಡಿ, ಈ ಭಾವನೆ ಬರಬಾರದು.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಸ್ವಾಮಿ, ನಿಮ್ಮ ಬಗ್ಗೆ ನಮ್ಮದೇನೂ ಟೀಕೆ ಇಲ್ಲ.

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ: ತಾವು, ತಮ್ಮ ಮನಸ್ಸಿನಲ್ಲಿಯೇ ಯೋಚನೆ ಮಾಡಿ, ಇದು ಸರಿಯೇ ಎಂದು ಯೋಚನೆ ಮಾಡಿ.

ಉಪಾಧ್ಯಕ್ಷರು : * ದಿನಾಂಕ 10.2.94ರಂದು ಸಮಯ 12.55 ರಲ್ಲಿ ಮಾನ್ಯ ಅಧ್ಯಕ್ಷರು ದಿನಾಂಕ 9.2.94ರಂದು ಶ್ರೀ. ಹೆಚ್. ಏಕಾಂತಯ್ಯನವರು ಮಾತನಾಡಿದ ಎಲ್ಲಾ ಭಾಗಗಳನ್ನು ಪರಿಶೀಲಿಸಿ ನಡವಳಿಕೆಯಲ್ಲಿ ಅವೆಲ್ಲವೂ ಕಡತದಲ್ಲಿ ಇರಬೇಕೆಂದು ಆದೇಶ ನೀಡಿರುವುದರಿಂದ ಅವುಗಳನ್ನು ಕಡತದಲ್ಲಿ ಹಾಗೆಯೇ ಉಳಿಸಲಾಗಿದೆ.) ಈಗ ಮಾನ್ಯ ಏಕಾಂತಯ್ಯನವರು ನನ್ನ ಮಗಳ ಮದುವೆಗಾಗಲೇ, ಮುಂಜಿಗಾಗಲೀ ಹಣ ತೆಗೆದುಕೊಳ್ಳತಕ್ಕ ಶಾಸಕ ಅಲ್ಲ ಎಂದು ಏನು ಹೇಳಿದ್ದಾರೆ, ಆ ಪದ ಕಡತದಿಂದ ಹೋಗಿದೆ ತಾವು ಮುಂದುವರಿಸಿ.

ಶ್ರೀ ಹೆಚ್. ಏಕಾಂತಯ್ಯ : ಈ ದೇಶದಲ್ಲಿ ಶಾಸಕರಾಗಲೀ, ಮತ್ತೊಬ್ಬರಾಗಲೀ, ಯಾರ ಬಗ್ಗೆಯೂ ನಾನು ಟೀಕೆ ಮಾಡಲ್ಲ. ಈ ರೀತಿಯಾಗಿ ಮಾಡುವುದಾದರೆ, it is a typical intelligenstia of Karnataka.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ಕಡತದಿಂದ ಕೆಲವು ಪದಗಳನ್ನು ತೆಗೆಯುವುದಕ್ಕೆ ನಾವು ಕೆಲವು ನಿಯಮಗಳನ್ನು ರೂಪಿಸಿದ್ದೇವೆ. ಯಾರಾದರೂ ಒಬ್ಬರು ಕೇಳಬೇಕಲ್ಲ, ಯಾರಿಗೋ ರಿಫ್ಲೆಕ್ಷನ್ ಆಗಿದೆ ಎಂದು ಹೇಳಿ ಕೇಳಬೇಕಲ್ಲ, ಯಾರಾದರೂ ಕೇಳಿದರೆ, ಸರಿ ಆದರೆ, ತಾವು ಏಕಾಏಕಿ ಕಡತದಿಂದ ತೆಗೆದುಹಾಕುವುದು ಒಳ್ಳೆಯ ಸಂಪ್ರದಾಯ ಅಲ್ಲ. ಎರಡನೆಯದು, ಅವರು ಹೇಳಿದ್ದನ್ನು, ಕೇಳಿ ಏಕೆ ವೀರಪ್ಪ ಮೊಯಿಲಿಯವರು ಇಷ್ಟೊಂದು ಕೋಪ ಮಾಡಿಕೊಂಡಿದ್ದಾರೋ ಗೊತ್ತಿಲ್ಲ, ಅವರು ಎಂದೂ ಸಂಯಮವನ್ನು ಕಳೆದುಕೊಳ್ಳುವವರಲ್ಲ. ಅವರು ಹೇಳಿದ್ದೇನು, ಕಾಕಂಬಿಯ ಬೆಲೆ ನಿಯಂತ್ರಣವನ್ನು ಕೇಂದ್ರ ಸರ್ಕಾರ ತೆಗೆದುಹಾಕಿದ್ದರಿಂದ ಅದರ ಬೆಲೆ 114 ಟನ್ಗೆ ಇದ್ದದ್ದು 2500 ರೂಪಾಯಿಗಳಿಗೆ ಹೆಚ್ಚಿದೆ ಎಂದು ಹೇಳಿದರು. ನಾನು ಅದಕ್ಕಿಂತ ಹಿಂದೆ ಹೋಗಿ, ಹೇಳುತ್ತೇನೆ. ಮೊದಲು ಕಾಕಂಬಿ ಒಂದು ಟನ್ನಿಗೆ 7 ರೂಪಾಯಿ ಇತ್ತು. ಇವತ್ತು ಒಂದು ಟನ್ನಿಗೆ 2200 ರಿಂದ 2500 ವರೆಗೆ ಹೋಗಿದೆ. ಇಷ್ಟು ದೊಡ್ಡ ಪ್ರಮಾಣದ ವ್ಯತ್ಯಾಸವಾಯಿತಲ್ಲ 114 ರಿಂದ 2,500 ರೂಪಾಯಿ ಆಯಿತಲ್ಲ. ಇಷ್ಟು ಲಾಭ ರೈತರಿಗೇ ಸಿಕ್ಕುವುದಾದರೆ ನಾನು ಸಂತೋಷ ಪಡುತ್ತೇನೆ. ಆದರೆ, ಈ ಹಣ ಮಧ್ಯವರ್ತಿಗಳಿಗೆ ಹೋಗುತ್ತಿದೆ, ರೈತರಿಗೆ ಸಿಗುತ್ತಾ ಇಲ್ಲ ಎನ್ನುವ ಮಾತನ್ನು ಹೇಳಿದರು. ಅದನ್ನು ಹೇಳುವಾಗ, ಕೇಂದ್ರ ಸರ್ಕಾರ ಇಂಥಾದ್ದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು ಎನ್ನುವುದು ಅವರ ಅಬಿಪ್ರಾಯ. ನೀವು ಏತಕ್ಕೆ ಇಷ್ಟೊಂದು ಉದ್ರೇಕರಾದಿರಿ ಎಂದು ಗೊತ್ತಾಗುತ್ತಿಲ್ಲ. ಅವರು ಹೇಳುವ ಧಾಟಿ ಬೇರೆ ಆಗಬಹುದು. His only motive is that the benefit of this enhanced rate should go to the farmers. This is the motive.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸದಸ್ಯರು ರೈತರಿಗೆ ಲಾಭವಾಗಿಲ್ಲವೆಂದು ಹೇಳಿದರು. ಮುಖ್ಯಮಂತ್ರಿಗಳು ರೈತರಿಗೆ ಲಾಭವಾಗಿದೆ ಎಂದು ಹೇಳುತ್ತಾರೆ. ಅದಕ್ಕೆ ಅವರು ಒಪ್ಪದೇ, ಮಧ್ಯವರ್ತಿಗಳ ಲಾಭಕ್ಕಾಗಿ ಮಾಡಿದಂಥಾದ್ದಾಗಿದೆ, ರೈತರಿಗೆ ಇದರ ಲಾಭ ಸಿಕ್ಕಿಲ್ಲ ಎಂದು ಹೇಳಿದುದರಲ್ಲಿ ಆಕ್ಷೇಪಣೆ ಮಾಡುವಂಥಾದ್ದು ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಒಬ್ಬ ಹಿರಿಯ ಸದಸ್ಯರು ಮಾತನಾಡುತ್ತಿದ್ದರು. ಮುಖ್ಯಮಂತ್ರಿಗಳಿಗೆ ಅವರು ಸಭಾನಾಯಕರಾಗಿ ಸಾಕಷ್ಟು ಶಾಂತ ರೀತಿಯಿಂದ ಈ ಸದನ ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ಇದೆ. ಅವರು ಏನು ತಪ್ಪು ಮಾತನಾಡಿದರು ಈ ಮೊಲ್ಯಾಸಿಸ್ನು ಡಿ-ಕಂಟ್ರೋಲ್ ಮಾಡಿದ ಮೇಲೆ, ರೈತರಿಗೆ ಅನುಕೂಲವಾಗಲಿಲ್ಲ ಮಧ್ಯವರ್ತಿಗಳಿಗೆ ಅನುಕೂಲವಾಗಿದೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಅಭಿಪ್ರಾಯ ಬೇರೆ ಆಗಬಹುದು, ಇಲ್ಲ ರೈತರಿಗೆ ಅನುಕೂಲವಾಗಿದೆ ಎಂದು ನೀವು ಹೇಳಬಹುದು. ಅದು ರೆಕಾರ್ಡ್ನಲ್ಲೇ

ಇರುವ ಹಾಗಿಲ್ಲ. ಉದ್ದಿಶ್ಯಪೂರ್ವಕವಾಗಿ ಅಪಾದನೆ ಮಾಡುತ್ತಿದ್ದೀರಿ, ಲೋಕಸಭಾ ಸದಸ್ಯರು ಏನು ಮಾಡುತ್ತಿದ್ದರು ಎಂದು ಹೇಳಿದರೆ, ಲೋಕಸಭಾ ಸದಸ್ಯರ ಹತ್ತಿರ ಹೋಗಿ ಕೇಳೋಣ. ಏನು ಮಾಡುತ್ತಿದ್ದರು, ಅಲ್ಲಿ ಏನು ಚರ್ಚೆಯಾಗಿದೆ ಎಂದು ಅದರ ಅಗತ್ಯ ಇದ್ದರೆ ಚರ್ಚೆ ಮಾಡೋಣ. ಆದರೆ, ಒಬ್ಬ ಹಿರಿಯ ಸದಸ್ಯರು ಮಾತನಾಡುತ್ತಿರತಕ್ಕ ಸಮಯದಲ್ಲಿ, ಮುಖ್ಯಮಂತ್ರಿಗಳೇ ಇಷ್ಟೊಂದು ಕೋಪ, ಆವೇಶದಿಂದ ಮಾತನಾಡಿ, ಇದೇನೋ ಅಪಮಾನವಾಗಿದೆ ಎನ್ನುವ ಮಟ್ಟಿಗೆ ತಾವು ಹೇಳುವುದಾದರೆ, ನಾವು ಹೇಗೆ ಕೆಲಸ ಮಾಡಬೇಕು. ಹಾಗಾದರೆ ನೀವು ಷರತ್ತು ಹಾಕಿಬಿಡಿ. ಹೀಗೀಗೆ ಮಾತನಾಡಬೇಕು ಎಂದು. ತಾವೂ ಅಷ್ಟೆ ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮನ್ನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ದಾಖಲೆಯಿಂದ ತೆಗೆದುಹಾಕಿಬಿಡುತ್ತೇನೆ ಎಂದು ಹೇಳಿದರೆ............

ಶ್ರೀ ಹೆಚ್. ಏಕಾಂತಯ್ಯ : ಅದನ್ನು ಪುನಃ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರೆ ಮಾತ್ರ ನಾನು ಮಾತನಾಡುತ್ತೇನೆ. ಇಲ್ಲದೇ ಹೋದರೆ ನಾನು ಮಾತನಾಡುವುದಿಲ್ಲ, ಈ ರೀತಿಯಾಗಿ, ಯಾವುದೇ ಪದವನ್ನು ಉಪಯೋಗಿಸದೇ ಇದ್ದರೂ ಸಹ ಒಂದು ರೀತಿ...........

ಶ್ರೀ ಆರ್.ವಿ. ದೇಶಪಾಂಡೆ : ಅವರು ಏನು ಹೇಳಿದರು, ನನ್ನ ಮಗಳ ಅಥವಾ ಮಗನ ಮದುವೆಗೆ ಯಾರ ಕಡೆಯಿಂದಲೂ ಹಣ ತೆಗೆದುಕೊಂಡಿಲ್ಲ ಎಂದು. ನಾನು ಲಂಚ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ, ಅದರ ಅರ್ಥ, ನೀವು ಲಂಚ ತೆಗೆದುಕೊಂಡ ಹಾಗೆ ಆಗುತ್ತದೆಯೇ? ಇದನ್ನು ಕಡತದಿಂದ ತೆಗೆಯತಕ್ಕ ಅವಶ್ಯಕತೆ ಇದೆಯೇ.......

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರು ಯಾರ ಬಗ್ಗೆಯೂ ಕೂಡ ಆಪಾದನೆ ಮಾಡಿಲ್ಲ, ಶಾಸಕರ ಮೇಲೆ ಮಾಡಿದ್ದಾರೋ ಮಂತ್ರಿಗಳ ಮೇಲೆ ಮಾಡಿದ್ದಾರೋ......

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಅವರು ಯಾರ ಮೇಲೂ ಆಪಾದನೆ ಮಾಡಿಲ್ಲ. ನಾನು ಪ್ರಾಮಾಣಿಕನು ಎಂದು ಹೇಳಿದ್ದಾರೆ. ಆದ್ದರಿಂದ ತಾವು ತಮ್ಮ ಆಜ್ಞೆಯನ್ನು ಪುನರ್ ಪರಿಶೀಲನೆ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು : ಬನ್ನಿಕೋಡ್ರವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಏಕಾಂತಯ್ಯನವರು ಮಾತನಾಡುತ್ತಾ ನನ್ನ ಮಗಳ ಅಥವಾ ನನ್ನ ಮಗನ ಮದುವೆ ಮಾಡುವುದಕ್ಕೆ ಮತ್ತೊಂದು ಕಡೆ ಲಂಚ ತೆಗೆದುಕೊಂಡು ಮತ್ತೊಂದು ತೆಗೆದುಕೊಂಡು ಮಾಡುವಂತಹ ಶಾಸಕ ನಾನಲ್ಲ ಎಂದು ಹೇಳಿದ್ದಾರೆ. ವ್ಯಕ್ತಿ ಅಂದ್ರೆ ಒಂದು ತರಹ, ಶಾಸಕ ಅಂದ್ರೆ ಏನೋ ಒಂದು ತರಹ ಜನರಲ್ ಅರ್ಥ ಬರುತ್ತದೆ. ಅದ್ದರಿಂದ ಯಾರಾದರೂ ಅಂತಹ ಶಾಸಕರು ಇರಬಹುದು ಎನ್ನುವ ಭಾವನೆ ಬರಬಹುದು.........

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಅವರು ಪ್ರಾಮಾಣಿಕರು ಅಂತ ಹೇಳಿದ್ದಾರೆ........

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಮಂತ್ರಿಗಳಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ ಯಾರೇ ಆಗಲಿ, ಇದೇ ರೀತಿಯ ಅರ್ಥಬರುವ ಹಾಗೆ ಮಾತನಾಡಿದಾಗ ಈ ಸಭೆಯಲ್ಲಿ ಅಂತಹ ನಡವಳಿಕೆ ಇದ್ದರೆ ನನ್ನದು ಇರಬೇಕು. ಅಂತಹ ನಡವಳಿಕೆಯನ್ನು ತಾವು ತೆಗೆದುಹಾಕುವುದಾದರೆ ನನ್ನದೂ ತೆಗೆದು ಹಾಕಬಹುದು, ಅದರಲ್ಲಿ ನನ್ನದೇನೂ ತಕರಾರು ಇಲ್ಲ, ಆದರೆ ನಾನು ಹೇಳಿದಂತಹ ಅರ್ಥ ಬರುವಂತಹ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಗಲಿ, ಬೇರೆಯವರು ಆಗಲಿ ಈ ಸಭೆಯಲ್ಲಿ ಮಾತನಾಡಿದ್ದರೆ ಅಂತಹ ಅರ್ಥಬರುವಂತಹ ವಾಕ್ಯಗಳನ್ನು ಮತ್ತು ಶಬ್ದಗಳನ್ನು ತೆಗೆದುಹಾಕಬೇಕು. ಇದು ಒಂದು ನೀತಿಯ ಪ್ರಶ್ನೆ ಆಗಬೇಕು. ಇವತ್ತಿನವರೆಗೂ ಅಂತಹ ಮಾತುಗಳನ್ನು ಯಾರೂ ಹೇಳಿಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಹೇಳಿಲ್ಲವೇ, ಸ್ವಾಮಿ, ತಾವು ಈ ರೀತಿ ಮಾಡುವುದಾದರೆ ನಾನು ಈ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್: ನಾನು ಪ್ರಾಮಾಣಿಕ ಅಂತ ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: ನಾನು ಭ್ರಷ್ಟ ಮುಖ್ಯಮಂತ್ರಿ ಅಲ್ಲ ಅಂದ್ರೆ ಬೇರೆಯವರು ಭ್ರಷ್ಟ ಮುಖ್ಯ ಮಂತ್ರಿ ಅಂಥ ಅರ್ಥವೇ? ಅವರು ಅನೇಕ ಸಾರಿ ಈ ಮಾತುಗಳನ್ನು ಹೇಳಿದ್ದಾರೆ. ಅವೆಲ್ಲವನ್ನೂ ಕೂಡ ಕಡತದಿಂದ ತೆಗೆದು ಹಾಕಬೇಕಾಗುತ್ತದೆ........

ಉಪಾಧ್ಯಕ್ಷರು: ಇದು ಪ್ರೆಸ್ಗೆ ಹೋಗುವುದರಿಂದ......

ಶ್ರೀ ಬಿ.ಎಚ್. ಬನ್ನಿಕೋಡ್: ತಾವು ಎಲ್ಲರಿಗೂ ಒಂದೇ ರೀತಿಯ ಅವಕಾಶ ಮತ್ತು ಒಂದೇ ರೀತಿಯ ಹಕ್ಕು ಕೊಡಬೇಕಾಗುತ್ತದೆ. ಕಾಲ ಕಾಲಕ್ಕೆ ಬೇರೆ ಬೇರೆ ನಿರ್ಣಯಗಳು ಕೊಡುವುದು ಸರಿಯಲ್ಲ. ಇದು ಸದಸ್ಯರ ಹಕ್ಕುಚ್ಯುತಿ ಆಗುತ್ತದೆ. ತಾವು ನಮ್ಮ ರಕ್ಷಕರು ಆಗಿರುವುದರಿಂದ ನಮ್ಮೆಲ್ಲರ ಹಕ್ಕು ರಕ್ಷಣೆ ಮಾಡಬೇಕು. ಅದನ್ನು ಕಡತದಿಂದ ತೆಗೆಯಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಬನ್ನಿಕೋಡ್ರವರೇ, ಇದರಲ್ಲಿ ಯಾರ ಹಕ್ಕು ಚ್ಯುತಿಯೂ ಆಗಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್: ಹಾಗಿದ್ದರೆ ಸದನದಲ್ಲಿ ಎಲ್ಲಾಪಕ್ಷದವರು ಇದ್ದಾರೆ ಅವರೆಲ್ಲರ ಅಭಿಪ್ರಾಯ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ಕಳೆದ ಎರಡು ಸದನದಲ್ಲಿ ನಡೆದ ರೀತಿ ನಡವಳಿಕೆಗಳು ಇಲ್ಲಿ ನಡೆಯುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಕಳೆದ ಅಧಿವೇಶನದ ನೆನಪು ಬರುತ್ತಿದೆ ಎಂದು ಅನಿಸುತ್ತದೆ. ಪುನಃ ಪುನಃ ಅದನ್ನು ಇಲ್ಲಿ ನಿರ್ಮಾಣ ಮಾಡಬೇಕು ಎನ್ನತಕ್ಕಂಥ ಮನಸ್ಸು ಮುಖ್ಯಮಂತ್ರಿಗಳಿಗೆ ಇದ್ದ ಹಾಗೆ ಕಾಣುತ್ತದೆ. ಏನೂ ಇಲ್ಲದಿದ್ದರೂ ಕೂಡ ಹೊಸದಾಗಿ ನೀತಿಪಾಠ ನಾವು ನಿಮ್ಮಿಂದ ಕಲಿಯಬೇಕಾಗಿದೆ. ನಮಗೆ ನೀವು ನೀತಿ ಪಾಠ ಹೇಳಿಕೊಡುವುದಕ್ಕಾಗುತ್ತದೆಯೇ? ನೀತಿ ಪಾಠ ಹೇಳಿಕೊಡಿ ನೋಡೋಣ. ಅವರು ಹೇಳಲೇ ಇಲ್ಲ, ಅವರು ಹೇಳದೇ ಇರುವ ಮಾತನ್ನು ಅವರು ಹೇಳಿದ್ದಾರೆಂದು ಹೇಳುತ್ತಿದ್ದೀರಿ. ಹಾಗಾದರೆ ನಾನು ಭ್ರಷ್ಟನಲ್ಲ ಅಂದ್ರೆ ನೀವು ಭ್ರಷ್ಟರೆಂದು ಅರ್ಥವೇ?

ಹೇಳಿ ತಾವು ಸ್ವಲ್ಪ ದಯವಿಟ್ಟು. ನಾನು ನನ್ನ ಮಗಳ ಮತ್ತು ಮಗನ ಮದುವೆ ಮಾಡುವುದಕ್ಕೆ ಬೇರೆ ಯಾವುದೇ ಲಾಬಿಯಿಂದ ದುರ್ಲಾಭ ಪಡೆದು ಮಾಡತಕ್ಕಂಥವನಲ್ಲ ಅಂದ್ರೆ ಬೇರೆಯವರೆಲ್ಲರೂ ಆ ದುರ್ಲಾಭ ಪಡೆಯತಕ್ಕಂಥವರು ಎಂದು ಅರ್ಥವೇ? ದಯವಿಟ್ಟು ಹೇಳಿ? ಏಕೆ ನಮಗೆಲ್ಲಾ ಹೊಸ ಪಾಠ ಕಲಿಸಲು ಹೊರಟಿದ್ದೀರಿ. ನಿಮ್ಮ ಹತ್ತಿರ ಏನು ನಾವು ಪಾಠ ಕಲಿಯಬೇಕಾಗಿಲ್ಲ. ದಯವಿಟ್ಟು ಅದನ್ನು ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ: ಈ ರೀತಿ ಆದರೆ ನಾವ್ಯಾರು ಮಾತನಾಡುವುದಕ್ಕೆ ತಯಾರು ಇಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ಒಬ್ಬೊಬ್ಬರಾಗಿ ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಏಕಾಂತಯ್ಯನವರ ಮನಸ್ಸಿಗೆ ಆಗಿರತಕ್ಕಂಥ ವೇದನೆ ನೋಡಿದರೆ, ಈ ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿ ಒಬ್ಬ ಸದಸ್ಯ ಕಣ್ಣೀರು ಹಾಕತಕ್ಕಂಥ ಪರಿಸ್ಥಿತಿ ಬಂದಿದೆ ಅಂದ್ರೆ ನಮಗೆಲ್ಲರಿಗೂ ಬಹಳ ದುಃಖ ಆಗುತ್ತಿದೆ.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್: ಏಯ್ ಅಂತಿರಲ್ಲಾ, ನಾಚಿಕೆ ಆಗಬೇಕು ನಿಮಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದು ನೋಡಿ. ಈ ರೀತಿ ಆದರೆ ಹೇಗೆ? ಇದು ಅತ್ಯಂತ ನೋವಿನ ಪ್ರಸಂಗ. ಇದು ಆಗಬಾರದು.

(ಗೊಂದಲ)

ಉಪಾಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಡೆಯಿರಿ ಸ್ವಾಮಿ, ನನಗೂ ಇಲ್ಲಿ ಮಾತನಾಡುವುದಕ್ಕೆ ಅಧಿಕಾರ ಇದೆ. ಮಾನ್ಯ ಮುಖ್ಯಮಂತ್ರಿಗಳು ಒಬ್ಬ ಸಭಾನಾಯಕನಾಗಿ ಒಬ್ಬ ಹಿರಿಯ ಸದಸ್ಯರಿಗೆ ನೋವು ಮಾಡುವ ರೀತಿ ಉದ್ದೇಶಪೂರ್ವಕವಾಗಿ ಅವರನ್ನು ಕೆಣಕುವಂತಹ ಪ್ರಯತ್ನ ಮಾಡಿದ್ದಾರೆ ನಮಗೂ ಮಾನ ಮರ್ಯಾದೆ ಇದೆ. ನಮಗೂ ಇತಿ ಮಿತಿ ಇದೆ. ನಾವು ಏನು ಮಾತನಾಡಬೇಕು ಎಂದು ನಿಮ್ಮಿಂದ ಪಾಠ ಹೇಳಿಸಿಕೊಂಡು ಮಾತನಾಡುವುದಕ್ಕೆ ಬಂದಿಲ್ಲ. ಏನು ಹೇಳಬೇಕು, ಏನು ಹೇಳಬಾರದು ಎನ್ನುವ ಜವಾಬ್ದಾರಿ ನಮಗೂ ಇದೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ನಡೆದುಕೊಂಡಂತಹ ರೀತಿಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಬೇಕು. ಅಲ್ಲಿಯವರೆಗೂ ಈ ಸದನ ನಡೆಯಲು ಸಾಧ್ಯವಿಲ್ಲ. ಈ ರೀತಿ ಆದರೆ ನಾವು ಇಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ.....

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ ಮಾನ್ಯ ಏಕಾಂತಯ್ಯನವರ ಬಗ್ಗೆ ನಮಗೆಲ್ಲಾ ವಿಶೇಷವಾದ ಗೌರವ ಇದೆ. ಅವರ ಮಾತನ್ನು ನಾವೆಲ್ಲ ಆಸಕ್ತಿಯಿಂದ ಆಲಿಸುತ್ತೇವೆ. ಅವರು ಯಾವ ವಿಷಯ ಮಾತನಾಡಿದರೂ ಕೂಡ ಆಳವಾಗಿ ಅಧ್ಯಯನ ಮಾಡಿ ಸಭೆಗೆ ಗೌರವ ಬರುವ ರೀತಿಯಲ್ಲಿ ಮಾತನಾಡುತ್ತಾರೆ. ಈ ಸಂದರ್ಭದಲ್ಲಿ ಇವತ್ತು ದುರಾದೃಷ್ಟವಶಾತ್ ಕೆಲವು ಮಾತುಗಳು ಅವರ ಬಾಯಿಂದ ಬಂದು ಕೆಲವರ ಮನಸ್ಸಿಗೆ ನೋವಾಗಿದೆ. ಅವರ ನೋವನ್ನು ಕೂಡ ವ್ಯಕ್ತಪಡಿಸಿದ್ದಾರೆ. ದಯವಿಟ್ಟು ನಾನು ಮಾನ್ಯ ಏಕಾಂತಯ್ಯನವರಲ್ಲಿ ಅಪೀಲು ಮಾಡಿಕೊಳ್ಳುತ್ತೇನೆ. ಕೇಳಿಕೊಳ್ಳುತ್ತೇನೆ, ಇಂತಹ ಸಭೆಯಲ್ಲಿ ಇಂತಹ ಏನಾದರೂ ಘರ್ಷಣೆಗಳು ಬಂದರೆ ಅವುಗಳನ್ನು ಇಲ್ಲೇ ಮರೆತು ಮತ್ತೆ ನಾವು ಮಾಮೂಲಿನಂತೆ ಕೆಲಸ ಮಾಡಿಕೊಂಡು ಹೋಗೋಣ ಮತ್ತೆ ಇದನ್ನೇ ದೊಡ್ಡದು ಮಾಡುವುದು ಬೇಡ. ಅವರ ಸಲಹೆ ಸಹಕಾರಗಳು ಪ್ರತಿಯೊಂದು ವಿಷಯದಲ್ಲೂ ಬೇಕು. ಪ್ರತಿಯೊಂದು ಸಲ ಅವರು ಕಾನೂನು ಪ್ರಕಾರ ಅಧ್ಯಯನ ಮಾಡಿ ಹೇಳುತ್ತಾರೆ. ನಾವು ಎಷ್ಟೋ ಸಾರಿ ತಿದ್ದಿಕೊಂಡಿದ್ದೇವೆ. ಅವರು ಏನಾದರೂ ಪ್ರಶ್ನೆ ಎತ್ತಬಹುದು ಎಂದು ನಾವು ಮೊದಲೇ ಬಹಳ ಹುಷಾರಾಗಿ ಕೆಲಸ ಮಾಡುತ್ತೇವೆ. ಆದ್ದರಿಂದ ಅವರು ತುಂಬಾ ಗೌರವಾನ್ವಿತ ಸದಸ್ಯರು. ಅವರು ಹೇಳಿದ್ದರಿಂದ ಕೆಲವರ ಮನಸ್ಸಿಗೆ ನೋವಾಗಿದೆ. ಆದರೂ ಈ ವಿಷಯದಲ್ಲಿ ಅವರಲ್ಲ ಅಂತ ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಯಾರಿಗೂ ನೋವು ಮಾಡುವ ಮಾತು ಅಲ್ಲ ಎಂದು ಅವರು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ ಮತ್ತು ಇದನ್ನು ಇಲ್ಲಿಗೆ ಬಿಟ್ಟು ಮುಂದಿನ ಕೆಲಸವನ್ನು ದಯವಿಟ್ಟು ಮಾಡೋಣ.

ಶ್ರೀ ಸಿ. ಬೈರೇಗೌಡ: ಈಗ ಕಡತದಿಂದ ಏತಕ್ಕೆ ತೆಗೆಯಬೇಕು. ನಾನು ನಿನ್ನೆ ಮಾತನಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಕೂಡ ಅದೇ ರೀತಿ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದ ಸದಸ್ಯರಿಂದ ನನಗೆ ಒಂದು ವಿವರಣೆ ಬೇಕಾಗಿದೆ. ಮಾನ್ಯ ಏಕಾಂತಯ್ಯನವರು ಯಾರ ಬಗ್ಗೆ ಏನು ಮಾತನಾಡಿದರು ನನಗೆ ಗೊತ್ತಿರುವ ಪ್ರಕಾರ, ಅವರು ಯಾರಿಗೂ ಅವಮಾನ ಮಾಡಿಲ್ಲ. ಅವರು ಏನು ಹೇಳಿದರು ಎಂದರೆ ನಾನು ನನ್ನ ಮಗಳ ಮದುವೆ ಮಾಡಲು, ನನ್ನ ಮಗನ ಮದುವೆ ಮಾಡಲು ಶಾಸಕನಾಗಿ ಯಾರಿಂದಲೂ ಹಣ ತೆಗೆದುಕೊಂಡು ಮಾಡಲ್ಲ ಅಂದರು. ಅಂದ್ರೆ ಅದರ ಅರ್ಥ ಬೇರೆಯವರು ಮಾಡಿದ್ದಾರೆಂದು ಆಗುತ್ತದೆಯೇ? ಮಾನ್ಯ ಮುಖ್ಯಮಂತ್ರಿಗಳು ಎಷ್ಟೋ ಸಾರಿ ಹೇಳಿದ್ದಾರೆ, ನಾನು ಕ್ಲೀನ್ ಗೌರ್ನಮೆಂಟ್ ಕೊಡುತ್ತೇನೆ ಎಂದು. ನಾನು ಯಾವುದೇ ಲಾಬಿಗೆ ಮಣಿಯುವುದಿಲ್ಲ ಅಂದ್ರೆ ಬೇರೆ ಮುಖ್ಯಮಂತ್ರಿಗಳು ಮಣಿದಿದ್ದಾರೆಂದು ಅರ್ಥ ಬರುತ್ತದೆಯೇ? ಆ ರೀತಿ ಹೇಳುವುದಕ್ಕೆ ಬರುತ್ತದೆಯೇ? ಅವರ ಸ್ಟ್ಯಾಂಡ್ ಅವರು ಹೇಳಿದರು. ಅದಕ್ಕೆ ನಿಮ್ಮ ಸದಸ್ಯರಿಗೆ ಏತಕ್ಕೆ ಬೇಜಾರು ಆಗಬೇಕು. ನಾನು ಪ್ರಾಮಾಣಿಕನಾಗಿದ್ದೇನೆಂದು ಹೇಳುವುದು ತಪ್ಪೇ. ಅಂದ ಮಾತ್ರಕ್ಕೆ ನೀವು ಅಪ್ರಾಮಾಣಿಕರು ಎಂದು ಹೇಳುವುದಕ್ಕಾಗುತ್ತದೆಯೇ? ತಾವು ಕಡತದಿಂದ ತೆಗೆದು ಹಾಕಲು ತಮ್ಮನ್ನು ಯಾರು ಕೇಳಿದರು. ತಾವು ತಪ್ಪು ತಿಳಿದುಕೊಳ್ಳಬೇಡಿ. ತಮ್ಮ ಮೇಲೆ ನಮಗೆ ಅಪಾರ ಗೌರವ ಇದೆ. ಕಡತದಿಂದ ತೆಗೆದು ಹಾಕಲು ತಮ್ಮನ್ನು ಯಾರು ಕೇಳಿದರು? ತಾವು ತಮ್ಮ ಮನಸ್ಸಿಗೆ ಬಂದ ಹಾಗೆ ತೆಗೆದು ಹಾಕುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಸದನವನ್ನು ಮನಸ್ಸಿಗೆ ಬಂದ ಹಾಗೆ ನಡೆಸುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ದೇಶಪಾಂಡೆಯವರು ಕಡತದಿಂದ ತೆಗೆದು ಹಾಕಲು ನಿಮ್ಮನ್ನು ಯಾರು ಕೇಳಿದರು ಅಂತ ಕೇಳಿದರು. ಮಾನ್ಯ ಸಚಿವರಾದ ಸಗೀರ್ ಅಹ್ಮದ್‌ರವರು ಕೇಳಿದರು........

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಶಾಸಕರು ಸಭಾತ್ಯಾಗ ಮಾಡಿದರು)

(ಗೊಂದಲ)

(ಈ ಹಂತದಲ್ಲಿ ಜನತಾ ದಳದ ಕೆಲವು ಶಾಸಕರು ಮತ್ತು ಇತರರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಈ ಹಿಂದೆ ಈ ಸಭೆಯ ಅಧ್ಯಕ್ಷನಾಗಿದ್ದ ಅಪರಾಧಕ್ಕಾಗಿಯೇ ನನಗೆ ತಿಳಿದ ಎರಡು ಮಾತು ಹೇಳಬೇಕು ಎಂದು ಬಹಳ ಹೊತ್ತಿನಿಂದ ಪ್ರಯತ್ನ ಮಾಡುತ್ತಿದ್ದೇನೆ. ಯಾರೂ ಅದಕ್ಕೆ ಅವಕಾಶ ಕೊಡುವ ಹಾಗೆ ಕಾಣಲಿಲ್ಲ. ನನ್ನ ಪ್ರಶ್ನೆ ಇಷ್ಟೆ, ನಿಯಮಗಳ ವ್ಯಾಪ್ತಿಯಲ್ಲಿ ಕಡತದಿಂದ ಪದಗಳನ್ನು ತೆಗೆಯುವುದಕ್ಕೆ ನಾವೇ ರೂಪಿಸಿಕೊಂಡಿದ್ದ ನಿಯಮಗಳಿವೆ. ನಿಮ್ಮ ಮನಸ್ಸಿಗೆ ಏನಾದರೂ ಅನ್‌ಪಾರ್ಲಿಮೆಂಟರಿ ಎಂದು ಕಂಡರೆ ಅದನ್ನು ತೆಗೆಯತಕ್ಕಂತಹ ಅಧಿಕಾರ ತಮಗಿದೆ. ಬೇರೆ ಸದಸ್ಯರಿಗೆ ಅದರಿಂದ ನೋವಾಗಿದ್ದರೆ ಅವರಿಂದ ನಮಗೆ ನೋವಾಗಿದೆ ಎಂದು ಕೇಳಿದಾಗ ಅದನ್ನು ಪರಿಶೀಲನೆ ಮಾಡಿ ತೆಗೆಯತಕ್ಕಂಥದ್ದು ಇದೆ. ಒಮ್ಮೆ ಪದವನ್ನು ಪ್ರಯೋಗ ಮಾಡುವಾಗ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಒಮ್ಮೆ ನಾವು ಪದಪ್ರಯೋಗ ಮಾಡಿದರೆ.......

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಅಯ್ಯೋ ವೆಂಕಟೇಶ್ ಅವರೇ, ನಿಮ್ಮಿಂದ ನಾನು ಪಾಠ ಕಲಿಯಬೇಕಾಗಿಲ್ಲ ಕುಳಿತುಕೊಳ್ಳಿ. ನೀವು ಇಲ್ಲಿನ ಜಾಗದಿಂದ ಹಿಂದಕ್ಕೆ ಏಕೆ ಹೋದಿರಿ ಎಂದು ಗೊತ್ತಿದೆ, ಕುಳಿತುಕೊಳ್ಳಿ. ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ. ನಾನು ಏನು ಕೇಳುತ್ತಿದ್ದೇನೆ, ಇಂತಹ ವಿಚಾರಗಳಲ್ಲಿ ಸದನವನ್ನು ನಡೆಸತಕ್ಕಂತಹ ಜವಾಬ್ದಾರಿ ತಮಗೆ ಎಷ್ಟು ಇದೆಯೋ ಅದಕ್ಕಿಂತ ಒಂದು ತೂಕ ಹೆಚ್ಚು ಈ ಸದನದ ನಾಯಕರಿಗಿದೆ. ನಾಯಕರು ಸಂಯಮವನ್ನು ಕಳೆದುಕೊಂಡರೆ ಸಭೆಯನ್ನು ನಿಯಂತ್ರಣಕ್ಕೆ ತರುವವರು ಯಾರು? ಆದ್ದರಿಂದ ಅವರು ಹೇಳಿದ್ದರಲ್ಲಿ ಸರಿ ತಪ್ಪುಗಳ ವ್ಯಾಖ್ಯಾನ ಮಾಡುವುದಕ್ಕೆ ಮುಂಚೆ ಅವರು ಕುಪಿತರಾದುದರಿಂದ ಎರಡು ಮಾತನ್ನು ಹೆಚ್ಚು ಹೇಳಿದರೂ ಸಹ ನನ್ನ ದೃಷ್ಟಿಯಲ್ಲಿ ಯಾವ ಅನ್‌ಪಾರ್ಲಿಮೆಂಟರಿ ವಾಕ್ಯವನ್ನೂ ಅವರು ಹೇಳಲಿಲ್ಲ, ಅದಕ್ಕಾಗಿ ಅವರೂ ಕೋಪಗೊಂಡರು, ಆ ಕೋಪದ ಜೊತೆಗೆ ಏನಾದರೂ ಸರಿಪಡಿಸೋಣ ಎಂದರೆ ತಾವೂ ಕಡತದಿಂದ ತೆಗೆದುಹಾಕ್ತೀನಿ ಅಂದು ಬಿಟ್ಟರೆ ಮತ್ತೆ ಸದನವನ್ನು ನಡೆಸುವುದು ಹ್ಯಾಗೆ? ನನ್ನ ಸಲಹೆ ಇಷ್ಟೆ, ನಡೆದ ಘಟನೆಗಳು, ವಾತಾವರಣ ತೀರ ಕಹಿಯಾಗಿದೆ. ಇದುವರೆಗೂ ನಡೆದುಕೊಂಡು ಬಂದಿರಿ, ಅದಕ್ಕಾಗಿ ನಾನು ಹೇಳಿದೆ, ಎಂದೂ ಸಂಯಮವನ್ನು ಕಳೆದುಕೊಳ್ಳುವ

ನೀವ್ಯಾಕೆ ಕಳೆದುಕೊಂಡಿರಿ ಅಂತ. ನಾವು 7 ಗಂಟೆ 8 ಗಂಟೆವರೆಗೂ ಈ ಸದನದಲ್ಲಿ ಕೂತು ಕೆಲಸ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ನಾವು ಎಲ್ಲವನ್ನೂ ನಿಯಮಗಳ ವ್ಯಾಪ್ತಿಯಲ್ಲಿ ಮಾಡುತ್ತೇವೆ ಅಂತ ಅಲ್ಲ, ತಾವು ಇದ್ದಿರಿ, ನಮ್ಮ ಸಲಹಾ ಸಮಿತಿಯಲ್ಲಿ ನಾನು ರಾಜ್ಯಪಾಲರ ಭಾಷಣ ಬಂದಾಗ ಮಸೂದೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂಬ ಮಾತನ್ನು ಹೇಳಿದೆ.

ಆದರೂ ಅನೇಕ ಮಸೂದೆಗಳು ರಾಜ್ಯಪಾಲರಿಂದ ಅಧ್ಯಾದೇಶವಾಗಿ ಹೊರಬಂದಿವೆ. ಅವು ಮಸೂದೆಯಾಗದೇ ಇದ್ದರೆ ನಿಯಮಬಾಹಿರವಾಗಿ ಹೋಗಿಬಿಡುವುದರಿಂದ ಈ ಅಧಿವೇಶನದ ಒಳಗಡೆ ಮುಗಿಯಬೇಕೆಂದು ನಾವು ವಿರೋಧಪಕ್ಷದಲ್ಲಿದ್ದು ನಿಮಗೆ ಸಹಕರಿಸಿದ್ದೇವೆ. ಇದು ಎಲ್ಲ ಸದಸ್ಯರಿಗೂ ತಿಳಿಯುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಅನೇಕ ಬಾರಿ, ಈ ಸದನದಲ್ಲಿ ನಾವು ಕೆಲವು ನಿಯಮ ಬಾಹಿರವಾದಂತಹ ಕೆಲಸಗಳನ್ನು ಮಾಡಿದ್ದೇವೆ. ಇಂತಹ ಸಂಕಟದಿಂದ ಬಿಡಿಸುವಂತಹ ಸಂದರ್ಭದಲ್ಲಿ ಅವರು ಹೇಳಿದಂತಹ ಕೆಲವು ಮಾತನ್ನು ಅನ್ಯಥಾ ಅರ್ಥೈಸತಕ್ಕಂಥಾದ್ದು ಒಳ್ಳೆಯದಲ್ಲ. ನಾನೂ ಸಹ ಸಭಾ ನಾಯಕರನ್ನು ಪ್ರಾರ್ಥನೆ ಮಾಡುತ್ತೇನೆ, ಇದು ಸರಿಯಾದದ್ದಲ್ಲ. ನೀವು ಸಂಯಮ ಕಳೆದುಕಂಡರೆ ಸದನ ನಡೆಸೋಕೆ ಕಷ್ಟವಾಗುತ್ತದೆ. ನೀವು ಇವತ್ತು ಸಂಯಮ ಕಳೆದುಕೊಂಡಿರಿ ನಿನ್ನೆನೂ ಸ್ವಲ್ಪ ಸಂಯಮ ಕಳೆದುಕೊಂಡಿರಿ, ಏತಕ್ಕೆಂದು ನನಗೆ ಗೊತ್ತಾಗಲಿಲ್ಲ. ಹೊಸ ಟಾನಿಕ್ ಯಾವುದು ಅಂತ ನನಗೆ ಗೊತ್ತಿಲ್ಲ. ಅದು ಒಳ್ಳೆಯದಲ್ಲ. ನಾನೇನು ಪ್ರಾರ್ಥನೆ ಮಾಡುತ್ತೇನೆಂದರೆ ಈಗ ಈ ಕಹಿ ವಾತಾವರಣವನ್ನು ಸರಿಪಡಿಸುವುದಕ್ಕೆ ನೀವು ತಯಾರಾಗಬೇಕು. ನಾನು ಅಧ್ಯಕ್ಷರಲ್ಲಿ ಡಬಲ್ ಅಪೀಲ್ ಮಾಡಿಕೊಳ್ಳುತ್ತೇನೆ. ನೀವು ಕಡತದಿಂದ ತೆಗೆದಿರತಕ್ಕಂಥಾದ್ದು ಏನಿದೆ, ಇದು ಸರಿ ಎಂದು ನನಗೂ ಕಂಡಿಲ್ಲ. ತಾವು ಅದನ್ನು ಮರುಪರಿಶೀಲನೆ ಮಾಡಬೇಕು. ಸಭಾನಾಯಕರು ಮುಖ್ಯಮಂತ್ರಿಗಳಾಗಿ ಕೆಲಸ ಮಾಡುವುದು ಬೇರೆ. ಪದೇ ಪದೇ ಹೇಳುತ್ತಿದ್ದೇನೆ, ನೀವು ಸಭಾನಾಯಕರಾಗಿ ಕೆಲಸ ಮಾಡಬೇಕು. ನೀವು ರಾಜ್ಯಕ್ಕೆ ಮುಖ್ಯಮಂತ್ರಿ, ಜೊತೆಗೆ ಈ ಸಭೆಗೆ ನೀವು ನಾಯಕರು. ಆದಕಾರಣ ಯಾವುದೇ ಕಾರಣಕ್ಕಾಗಿ ನೀವು ಸಂಯಮವನ್ನು ಕಳೆದುಕೊಳ್ಳಬಾರದು ಎಂದು ನನ್ನ ಕಳಕಳಿಯ ಮನವಿ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಇದು ಇವತ್ತಿನದಲ್ಲ, ನಿನ್ನೆನೂ ಕೂಡ ನಡೆದಿದೆ. ನಿನ್ನೆ ನಾನು ಬಳಸಿದ ಕೆಲವು ಪದಗಳಿಗೂ ಇದೇ ರೀತಿ ಮಾಡಿದ್ದಾರೆ. ಇವರು ಹೇಳಿದಂತೆ ಇಲ್ಲಿ ಕೂತು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಹೊಸದಾಗಿ ನಮಗೆ ಪಾಠ ಹೇಳಿಕೊಡಬೇಕಾಗಿಲ್ಲ, ನಿಮ್ಮ ಈ ಪಾಠವನ್ನು ನಿಲ್ಲಿಸದೇ ಇದ್ದರೆ ನೀವು ಸದನ ನಡೆಸುವುದಕ್ಕೆ ಕಷ್ಟವಾಗುತ್ತದೆ ಅನ್ನುವ ಮಾತನ್ನು ಹೇಳಬೇಕಾಗುತ್ತದೆ. ಏಕೆಂದರೆ ನಿನ್ನೆ ನಾನು ಬಳಸಿದಂತಹ ಪದ ಅನ್ಪಾರ್ಲಿಮೆಂಟರಿ ಏನೂ ಆಗಿರಲಿಲ್ಲ. ಆದರೂ ಸಹ ತಾವು ಕಡತದಿಂದ ತೆಗೆದುಹಾಕಿದ್ದೀರಿ. ಯಾವ ಕಾರಣದಿಂದ ತಾವು ತೆಗೆದುಹಾಕಿದ್ದೀರಿ? ಅದೇ ಪ್ರಯೋಗ ಇವತ್ತಿನ ದಿವಸವೂ ನಡೆದಿದೆ. ಇದನ್ನು ಪ್ರತಿಭಟಿಸಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಜನತಾದಳದ ಕೆಲವು ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ನಾನು ತಮಗೆ ಒಂದು ಸಲಹೆ ಕೊಡುತ್ತಿದ್ದೇನೆ. ತಾವು ಈ ಸದನವನ್ನು 10 ನಿಮಿಷ ಮುಂದೂಡಿ ದಯವಿಟ್ಟು ಎಲ್ಲರನ್ನೂ ತಮ್ಮ ಕೊಠಡಿಗೆ ಕರೆದು ಸ್ವಲ್ಪ ಕುಳಿತು ಮಾತಾಡುವುದು ಒಳ್ಳೆಯದು. ಏಕೆಂದರೆ ವಾತಾವರಣ ಸರಿ ಇಲ್ಲ. ದಯವಿಟ್ಟು ಈ ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ. ಎಲ್ಲ ಸರಿಹೋಗುತ್ತದೆ ಎಂದು ನಾನು ತಮ್ಮಲ್ಲಿ ಹಾಗೂ ಮಾನ್ಯ ಸಭಾನಾಯಕರಲ್ಲಿ ವಿನಂತಿ

ಮಾಡುತ್ತಿದ್ದೇನೆ. ಎಂದೂ ಮುಖ್ಯಮಂತ್ರಿಗಳು ಈ ತರಹ ನಡೆದುಕೊಳ್ಳುತ್ತಿರಲಿಲ್ಲ. ನಾನು ಬಹಳ ವರ್ಷಗಳಿಂದ ನೋಡಿದ್ದೇನೆ, ನಿನ್ನೆ ಇವತ್ತು ಏಕೆ ಸ್ವಲ್ಪ ಆವೇಶ ಭರಿತರಾಗುತ್ತಿದ್ದೀರಿ. ಅಧ್ಯಕ್ಷರೇ, ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ದಯವಿಟ್ಟು ಈ ಸದನವನ್ನು 10 ನಿಮಿಷ ಮುಂದೂಡಿ. ತಮ್ಮ ಕಾರ್ಯಾಲಯದಲ್ಲಿ ಕುಳಿತುಕೊಳ್ಳೋಣ. ಈ ನಡವಳಿಕೆ ಬಗ್ಗೆ ಅವರು ಬಳಸಿದ್ದು ಸಂಸದೀಯ ಪದವೇ ಅಲ್ಲವೇ ಎಂಬುದನ್ನು ಅಲ್ಲಿ ಚರ್ಚೆ ಮಾಡೋಣ. ಹಾಗೆಯೇ ಸಂಸದೀಯ ಸಚಿವರಲ್ಲಿಯೂ ಪ್ರಾರ್ಥನೆ ಮಾಡುತ್ತೇನೆ. ಕಾನೂನು ಆಮೇಲೆ ಓದೋಣ. ನಾನು ಒಳ್ಳೆಯ ಸಲಹೆ ಕೊಡುತ್ತಿದ್ದೇನೆ. ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ. ಅದರಿಂದ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಕೆಟ್ಟ ಪರಿಣಾಮ ಆಗುತ್ತದೆ. ನಾವು ಹೇಳೋದು ಹೇಳಿದ್ದೇವೆ, ನಿಮ್ಮ ಹಣೆಬರಹ, ಏನಾದರೂ ಮಾಡಿಕೊಳ್ಳಿರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ತಾವು ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಏನು ತೀರ್ಮಾನ ಮಾಡಿದ್ದೀರೋ ಅದನ್ನು ಛಾಲೆಂಜ್ ಮಾಡತಕ್ಕಂತಹ ಅಧಿಕಾರ ಯಾವ ಸದಸ್ಯರಿಗೂ ಇಲ್ಲ. ಇದು ಮೊದಲನೇ ಪಾಯಿಂಟ್. ಎರಡನೆಯದು, ಅನ್‌ಪಾರ್ಲಿಮೆಂಟರಿ ಅಲ್ಲದೇ ಹೋದರೂ ಅನ್ಡಿಗ್ನಿಫೈಡ್, ಇನ್ಡಿಸೆಂಟ್ ಈ ತರಹ ಪದಗಳಿಗೆ ಅನ್ವಯಿಸುವಂತಹ ನಡವಳಿಕೆ ಇದ್ದರೂ ಕೂಡ ಅದನ್ನು ಕಡತದಿಂದ ತೆಗೆದುಹಾಕುವ ಅಧಿಕಾರ ತಮಗಿದೆ. ಮೂರನೆಯದು, ಮುಖ್ಯಮಂತ್ರಿಗಳು ಸಿಟ್ಟಾದರು ಅನ್ನುವುದಕ್ಕಿಂತ ಹೆಚ್ಚಾಗಿ ಮಾನ್ಯ ಸದಸ್ಯರಾದ ಏಕಾಂತಯ್ಯನವರು ಬಹಳ ಸಿಟ್ಟು ಮಾಡಿದರು, ನಾನು ಅಂಥವನಲ್ಲ ಇಂಥವನಲ್ಲ ಅಂದರೆ ಸಹಜವಾಗಿಯೇ ಬೇರೆಯವರು ಅಂಥವರಿದ್ದಾರೆ ಅನ್ನುವ ಭಾವನೆ ಬರುತ್ತದೆ. ಇದರಿಂದ ಏನಾಯಿತು ಅಂದರೆ, ಎಲ್ಲ ಸದಸ್ಯರೂ ಕೆರಳಿದರು.

ಅವರವರ ಭಾವನೆಯನ್ನು ವ್ಯಕ್ತಪಡಿಸಿದರು. ಇದಕ್ಕಿಂತ ಮುಂಚೆ ಮಾನ್ಯ ಸದಸ್ಯರು ಕೇಂದ್ರ ಸರ್ಕಾರದವರ ಮೇಲೆ ಆರೋಪಣೆ ಮಾಡಿ ಯಾರೋ ವೆಸ್ಟೆಡ್ ಇಂಟರಸ್ಟ್‌ಗೆ ಸಹಾಯ ಮಾಡುವ ದೃಷ್ಟಿಯಿಂದ ಈ ಒಂದು ನಿಲುವನ್ನು ತೆಗೆದುಕೊಂಡರು ಅನ್ನುವ ಮಾತನ್ನು ಆಡಿದರು. ಇದು ಸರಿಯಾದ ಮಾತಲ್ಲ. ಇವೆರಡು ಮಾತುಗಳಿಂದ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೇ ವಿನಹ ಅವರ ಮೇಲೆ ಬೇರೆ ಯಾವ ವಿಧವಾದ ಆಪಾದನೆಯನ್ನೂ ಮಾಡಲಿಲ್ಲ. ಅವರೆಲ್ಲ ಹಿರಿಯ ಸದಸ್ಯರಾಗಿದ್ದುಕೊಂಡು ಇದೊಂದು ಕಾರಣ ಮಾಡಿ ಸಭೆಯಿಂದ ಹೊರಗೆ ಹೋಗಬಾರದಿತ್ತು. ಈ ಸಭೆಯನ್ನು ಈಗ ಕ್ರಮವಾಗಿ ಮುಂದುವರೆಸುವುದಕ್ಕೆ ಯಾವ ತೊಂದರೆ ಇಲ್ಲ ಎಂದು ಇಷ್ಟು ಹೇಳುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಸದನದ ಕೆಲವು ನಿಯಮಗಳಿವೆ. ನಮ್ಮ ಅಥವಾ ಯಾವುದೇ ಸನ್ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಆ ನಿಯಮಗಳಿಗೆ ಅನುಸಾರವಾಗಿ ಸಭೆ ನಡೆಯುತ್ತಿಲ್ಲ ಮತ್ತು ವಿಚಾರಗಳ ವಿಶ್ಲೇಷಣೆ ಆಗಿಲ್ಲ ಎಂದು ಆಕ್ಷೇಪಣೆ ಎತ್ತತಕ್ಕಂತಹ ಒಂದು ಹಕ್ಕು ಹಾಗೂ ಸಂಪ್ರದಾಯ ಈ ಸದನದ ಸದಸ್ಯರಿಗೆ ಇದೆ. ಆ ಕಡೆಗೂ ಇದೆ, ಈ ಕಡೆಗೂ ಇದೆ. ಸನ್ಮಾನ್ಯ ಹಿರಿಯ ಸದಸ್ಯರು ಎರಡು ಸಾರಿ ತಪ್ಪು ಮಾಡಿದರು, ಅದು ಅವರ ದೃಷ್ಟಿಯಲ್ಲಿ ಸರಿಕಾಣಬಹುದು. ಆದರೆ ಈ ಸದನದ ದೃಷ್ಟಿಯಲ್ಲಿ ಅದು ಸರಿ ಇದೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡತಕ್ಕಂಥಾದ್ದು ತಮಗೆ ಬಿಟ್ಟದ್ದು. ಆಫ್ಟರ್ ಅಲ್ ಅದು ನಾವು ತೆಗೆದುಕೊಂಡಂತಹ ನಿರ್ಣಯವಲ್ಲ, ಕೇಂದ್ರ ಸರ್ಕಾರ ತೆಗೆದುಕೊಂಡಂತಹ ನಿರ್ಣಯ. ಅಂತಹ ನಿರ್ಣಯದ ಬಗ್ಗೆ ಆಪಾದನೆ ರೀತಿಯಲ್ಲಿ ಚರ್ಚೆ ಮಾಡತಕ್ಕದ್ದನ್ನು ಕಂಡು ಅದಕ್ಕೆ ಈ ವೇದಿಕೆಯನ್ನು ಉಪಯೋಗ

ಮಾಡಬಾರದೆಂದು ನಾನು ಆಕ್ಷೇಪಣೆ ಎತ್ತಿದೆ. ಅದರ ಮೇಲೆ ತೀರ್ಮಾನ ತೆಗೆದುಕೊಳ್ಳತಕ್ಕದ್ದು ತಮಗೆ ಬಿಟ್ಟಿದ್ದು, ಈ ಸದನಕ್ಕೆ ಬಿಟ್ಟಿದ್ದು, ಅದರ ಮೇಲೆ ನನ್ನ ಸಿಟ್ಟಿನ ಪ್ರಶ್ನೆಯೇ ಬರುವುದಿಲ್ಲ. ಆದರೆ ಆಕ್ಷೇಪಣೆ ಎತ್ತತಕ್ಕಂತಹ ಹಕ್ಕು ನನಗೆ ಇದೆ, ನಾನು ಎತ್ತಿದ್ದೇನೆ. ಅದಕ್ಕೆ ಉತ್ತರ ಕೊಡಬೇಕಾದ ಹಕ್ಕು ಅವರಿಗೆ ಇದೆ. ಇದೆಲ್ಲಾ ಡಿಬೆಟ್ನಲ್ಲಿ ಕೊಂಡು-ಕೊಳ್ಳತಕ್ಕಂತಹ ಮಾತುಕತೆ ಏನು ಇದೆ ಆ ವಿಟ್ಸ್ ಇಲ್ಲದಿದ್ದರೆ ಕಷ್ಟವಾಗುತ್ತದೆ. ಹಿಂದೆ ಇದಕ್ಕಿಂತ ಹೆಚ್ಚು ನಡೆದಿದೆ. ಅವರ ನಾಯಕರೇ ಇಲ್ಲಿ ಮುಖ್ಯ ಮಂತ್ರಿಯಾಗಿದ್ದರು. ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಆಗ ಇದೇ ಜಾಗದಲ್ಲಿ ಕುಳಿತುಕೊಂಡು ಏನೇನು ಹೇಳಿದ್ದಾರೆ ಅದು ಕಡತದಲ್ಲಿದೆ. ಕೆಲವನ್ನು ಕಡತದಿಂದ ತೆಗೆದಿದ್ದೀರಿ. ಅದೆಲ್ಲಾ ಹಳೆಯ ಕಥೆ ಆಗಿ ಹೋಯಿತು. ಕೆಲವು ಸಾರಿ ಇಂತಹ ಮಾತುಕತೆಗಳು ಉದ್ವೇಗದಲ್ಲಿ ಆಗುತ್ತವೆ. ಇದಕ್ಕೆ ಸಿಟ್ಟು ಮಾಡಿಕೊಂಡು ಅಳುತ್ತಾ ಕುಳಿತುಕೊಂಡರೆ ಈ ಸದನವನ್ನು ನಡೆಸಲಿಕ್ಕಾಗುವುದಿಲ್ಲ. Have we to influenced by this. 2ನೇ ಸಲ ಪುನಃ ಬಂತು. ಅದು ಸನ್ಮಾನ್ಯ ಸದಸ್ಯರಿಗೆ ಸಂಬಂಧಪಟ್ಟಿದ್ದು. ಶ್ರೀ ಸಗೀರ್ ಅಹ್ಮದ್ರವರು ಎತ್ತಿದರು. ರೂಲ್ 337ರ ಪ್ರಕಾರ ತಮಗೆ ಡಿಸ್ಕ್ರಿಷನ್ ಇದೆ. ಯಾವುದೇ ಒಂದು ಶಬ್ದ, ಅದು ಅನ್ ಡಿಗ್ನಿಫೈಡ್ ಆಗದೇ ಇದ್ದರೂ ಕೂಡ ಆ ಭಾವನೆಗಳಿಗೆ ಅವಕಾಶ ಕೊಡುತ್ತದೆ ಎಂದು ಗೊತ್ತಾದರೆ ಅದನ್ನು ಕಿತ್ತು ಹಾಕತಕ್ಕ ಅಧಿಕಾರ Discretion, absolutely it lies with you. ಅದನ್ನು ಯಾರೂ ಮೂವ್ ಮಾಡಬೇಕಾಗಿಲ್ಲ. ತಾವು ರೂಲ್ 337ರ ಪ್ರಕಾರ ಮೂವ್ ಮಾಡಿದ್ದರೆ ಚರ್ಚೆ ಮಾಡಬಹುದಿತ್ತು. ಇದರ ಬಗ್ಗೆ ಚರ್ಚೆ ಮಾಡಬಹುದು.

ಇಬ್ಬರೂ ಕೂಡಿ ಚರ್ಚೆ ಮಾಡಿದಾಗ, ಇಲ್ಲ ಚರ್ಚೆ ಮಾಡಬಾರದು ಅಥವಾ ತಾವು ಕೊಟ್ಟಂತಹ ರೂಲಿಂಗ್ ವಿರುದ್ಧವೆಂದು, ನಮ್ಮ ವಿರುದ್ಧ ವಾಕೌಟ್ ಮಾಡಿದ ಹಾಗೆ ಆಗಲಿಲ್ಲ. ತಮ್ಮ ತೀರ್ಪಿಗೆ ವಿರುದ್ಧ ವಾಕೌಟ್ ಮಾಡಿದ ಸಂಪ್ರದಾಯವೇನು ಇದೆ ಅದು ಈ ಸದನದ ಸಂಪ್ರದಾಯಕ್ಕೆ ಒಳ್ಳೆಯದಲ್ಲ ಮತ್ತು ಅದು ಯಾರೂ ಮೆಚ್ಚತಕ್ಕ ಸಂಪ್ರದಾಯ ಅಲ್ಲ. ಆದರೂ ಕೂಡ ನಮ್ಮ ದೃಷ್ಟಿಯಲ್ಲಿ ವಿರೋಧ ಪಕ್ಷದ ನಾಯಕರು, ಸದಸ್ಯರು ಚರ್ಚೆಯಲ್ಲಿ ಭಾಗ ವಹಿಸಬೇಕು. ನಾವು ಅವಸರ ಅವಸರವಾಗಿ ಬಿಲ್ಲನ್ನು ಪಾಸ್ ಮಾಡಿಕೊಂಡು ಹೋಗಬೇಕಾದ ಅವಶ್ಯಕತೆ ಇಲ್ಲ. ತಮ್ಮ ಛೇಂಬರ್ಗೆ ಅವರನ್ನೂ ಕರೆಯಿರಿ, ಅವರಿಗೆ ಸಮಾಧಾನ ಮಾಡೋಣ. ವಿಚಾರ ತಿಳಿಯಬೇಕಾಗಿದೆ. ಅವರು ಎತ್ತಿದ್ದು ಸರಿ ಎಂದು ಇಲ್ಲಿ ಎಲ್ಲ ನಾವು ಕೈ ಎತ್ತಬೇಕೇ ಅಥವಾ ನಾವು ಎತ್ತಿದಂತಹ ವಿಷಯವೆಲ್ಲಾ ಸರಿ ಎಂದು ಅವರ ಕೈ ಎತ್ತಬೇಕೇ ಆ ಅಭಿಪ್ರಾಯದ ಮೇಲೆ ಒತ್ತಾಯ ಹೇರುವುದಾದರೆ ಇಲ್ಲಿ ಯಾವ ರೀತಿ ಡಿಬೆಟ್ ಆಗುವುದಕ್ಕೆ ಸಾಧ್ಯವಿದೆ? No Democratic debate can take place as this way.

ತಾವು ತೀರ್ಪು ಕೊಟ್ಟದ್ದು ತಪ್ಪು, ಸಭಾ ನಾಯಕರು ಮಾತನಾಡಿದ್ದು ತಪ್ಪು, ಅದು ಸಾಬೀತಾಗಬೇಕೆಂದು ಹೇಳತಕ್ಕಂಥ ಒತ್ತಾಯ ಬಹುಶಃ ಹಿಂದೆ ಯಾವ ಕಾಲದಲ್ಲೂ ನಡೆದಿಲ್ಲ. ಇಂತಹ ಒತ್ತಾಯ ನನಗೆ ನೆನಪಿದ್ದ ಹಾಗೆ ಆಗಿಲ್ಲ. ನನ್ನ ನೆನಪಿಗೆ ಬಂದ ಪ್ರಕಾರ ನಾನು 1972 ರಿಂದ ನೋಡುತ್ತಿದ್ದೇನೆ. ಈ ರೀತಿಯಲ್ಲಿ ಆಕ್ಷೇಪಣೆ ಎತ್ತಿ ಸಭಾತ್ಯಾಗ ಮಾಡಿದಂತಹ ಪ್ರಸಂಗ ಇವತ್ತಿನವರೆಗೆ ಈ ಸದನದಲ್ಲಿ ಆಗಿಲ್ಲ. That will be curtailing the power of the Speaker in giving a decision , curtailing the power of the hon. Members including the Hon. Leader of the Opposition, the Leader of the House in raising certain objections. If raising

objection is undemocratic, or if raising an objection is dictatorial, I am afraid, this House cannot function.

ಆದರೂ ಕೂಡ ನಮಗೆ ತಾಳ್ಮೆಯಿದೆ, ಸಂಯಮ ಇದೆ, ಅವರನ್ನು ಕರೆಯಿರಿ ಮಾತನಾಡೋಣ. ಅವರು ಹಿರಿಯರು ಅವರಿಗೆ ಬೇಸರವಾಗಿರಬಹುದು. ಏಕೆಂದರೆ ಎರಡು ಸರ ಎಕ್ಸೆಪಂಜ್ ಆದರೆ ಅವರಿಗೆ ಫೀಲ್ ಆಗಬಹುದು. We feel it. I also feel it. Naturally he must have felt it. Our intention is to raise the issue. If raising an issue can hurt, perhaps no Legislator can debate here.

ಶಾಸಕರುಗಳು ಎಷ್ಟೋ ಅಲಿಗೇಷನ್ಸ್ ಅನ್ನು ಈ ಕಡೆಯಿಂದ, ಆ ಕಡೆಯಿಂದ ಮಾಡುತ್ತಾರೆ. ಹಾಗಾದರೆ ಆಗ ಮಂತ್ರಿಗಳು ಅಳುತ್ತಾ ಕುಳಿತುಕೊಂಡರೆ, ಇಲ್ಲವೇ ಸಭಾತ್ಯಾಗ ಮಾಡಿದರೆ ಹೇಗೆ ಅಧ್ಯಕ್ಷರೇ? ಹಾಗಾದರೆ ಅಳುವುದೇ ಒಂದು ಅಸ್ತ್ರವಾದರೆ ಪ್ರಜಾಪ್ರಭುತ್ವದಲ್ಲಿ ಈ ಸದನದಲ್ಲಿ, ಅಳುವ ಅಸ್ತ್ರವನ್ನು ಉಪಯೋಗ ಮಾಡಿಕೊಂಡು ಡಿಬೆಟ್ಟಳನ್ನು ನಡೆಸಿದರೆ ಅದು ಬಹಳ ಕಷ್ಟವಾಗುತ್ತದೆ. ತಾವು ಅವರನ್ನು ತಮ್ಮ ಕೊಠಡಿಗೆ ಕರೆಯಿರಿ. ನಾವು ಸಾವಧಾನದಿಂದ ಅವರ ವಿಚಾರಗಳನ್ನು ಕೇಳೋಣ. ಯಾವುದೇ ಪ್ರತಿಷ್ಠೆ ನಮಗೆ ಇಲ್ಲ. ಎಲ್ಲಾ ವಿಷಯಗಳನ್ನು ಕೇಳೋಣ. ಆದರೆ ಎಲ್ಲಾ ವಿಷಯಗಳನ್ನು ಒಳಗೊಂಡಂತೆ ಏನಾದರೂ ಇಲ್ಲಿ ಮಾತನಾಡಬಹುದೆಂಬ ಅಭಿಪ್ರಾಯ ಅವರಿಗೆ ಬರುವುದು ಹಾಗೂ ಈ ಸದನದಿಂದ ಹೊರಗೆ ಹೋಗತಕ್ಕಂಥಾದ್ದು ಸೂಕ್ತವಾದ ಸಂದೇಶ ಅಲ್ಲ.

ಉಪಾಧ್ಯಕ್ಷರು : ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸಭೆಯು ಪುನಃ 7-20 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ಸದಸ್ಯರುಗಳ ಹಾಜರಾತಿಯು ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅವಶ್ಯಕವಾಗಿದೆ. ಆದರೆ ಅವರುಗಳೆಲ್ಲ ಈಗ ಸಭೆಯನ್ನು ಬಿಟ್ಟು ಹೊರಗಡೆ ಹೋಗಿದ್ದಾರೆ. ಆದ್ದರಿಂದ ಸಭೆಯ ಮುಂದಿನ ನಡವಳಿಕೆಗಳನ್ನು ನಾಳೆಯವರೆಗೆ ಮುಂದೂಡಿ, ನಾಳೆ ವಿರೋಧ ಪಕ್ಷದ ಸದಸ್ಯರುಗಳ ಹಾಜರಾತಿಯಲ್ಲಿ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈ ಸದನವನ್ನು ಮುಂದೂಡುವ ಮೊದಲು, ಬೆಳಿಗ್ಗೆ ಈ ಸದನದಲ್ಲಿ ಭಾರತದ ಪ್ರಖ್ಯಾತ ಕ್ರಿಕೆಟ್ ಪಟು ಕಪಿಲ್ದೇವ್ರವರು ಏನು ವಿಶ್ವ ದಾಖಲೆಯನ್ನು ಮುರಿದಿದ್ದಾರೆ, ಅದರ ಪ್ರಯುಕ್ತ ಅವರಿಗೆ ಅಭಿನಂದನಾ ಸಂದೇಶವನ್ನು ಕಳಿಸಿಕೊಡಬೇಕೆಂದು ತಾವುಗಳೆಲ್ಲರು ಕೇಳಿಕೊಂಡ ಮೇರೆಗೆ ಈ ರೀತಿ ಅಭಿನಂದನಾ ಸಂದೇಶವನ್ನು ಹೊರಡಿಸುತ್ತಿದ್ದೇನೆ.

ಸನ್ಮಾನ್ಯ ಸದಸ್ಯರೆ, ಟೆಸ್ಟ್ ಕ್ರಿಕೆಟ್ನಲ್ಲಿ ಅತೀ ಹೆಚ್ಚು ವಿಕೆಟ್ಗಳನ್ನು ಗಳಿಸಿ ವಿಶ್ವ ದಾಖಲೆಯನ್ನು ಸ್ಥಾಪಿಸಿದ ಭಾರತದ ಆಲ್ ರೌಂಡ್ ಕ್ರಿಕೆಟ್ ಆಟಗಾರರಾದ ಕಪಿಲ್ದೇವ್ರವರ ಹೆಸರನ್ನು ಕೇಳರಿಯದ ಭಾರತೀಯರಿರಲಾರರು. ಭಾರತೀಯ ಕ್ರಿಕೆಟ್ ಆಟಕ್ಕೆ ಹೊಸ ಆಯಾಮವನ್ನೇ ಸೃಷ್ಟಿಸಿದ ಅದೃಷ್ಟ ವ್ಯಕ್ತಿತ್ವದ ಶ್ರೀ ಕಪಿಲ್ದೇವ್ರವರು ಬೆಂಗಳೂರಿನಲ್ಲಿ ಭಾರತ ಮತ್ತು ಶ್ರೀಲಂಕಾ ನಡುವೆ ಇತ್ತೀಚೆಗೆ ನಡೆದಂಥ ಎರಡನೆ ಕ್ರಿಕೆಟ್ ಟೆಸ್ಟ್ನಲ್ಲಿ ನ್ಯೂಜಿಲೆಂಡ್ನ ಸರ್ ರಿಚರ್ಡ್ ಹ್ಯಾಡ್ಲಿಯವರ ಹೆಸರಿನಲ್ಲಿದ್ದ 431 ವಿಕೆಟುಗಳ ವಿಶ್ವ ದಾಖಲೆಯನ್ನು ಸಮಗಟ್ಟಿ, ಅಹಮದಾಬಾದ್ನ ಮೊಟೇರ ಕ್ರೀಡಾಂಗಣದಲ್ಲಿ ಆರಂಭವಾದ ಮೂರನೆ ಮತ್ತು ಅಂತಿಮ ಕ್ರಿಕೆಟ್ ಟೆಸ್ಟ್ನಲ್ಲಿ ವಿಕೆಟ್ನ

ಎವರೆಸ್ಟನ್ನು ತಲುಪುವಲ್ಲಿ ಯಶಸ್ವಿಯಾದರು. ತಮ್ಮ ಕನಸೆಲ್ಲವನ್ನು ನನಸು ಮಾಡಿದ ಮಾನ್ಯ ಕಪಿಲ್ ದೇವರ ಸಾಧನೆ ಬಗ್ಗೆ ಭಾರತದ ಪ್ರತಿಯೊಬ್ಬರೂ ಹೆಮ್ಮೆ ಪಡಬೇಕಾಗಿದೆ ಮತ್ತು ಈ ದಿನವನ್ನು ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥ ಸಂಗತಿ. ಮತ್ತು ನಮ್ಮ ರಾಷ್ಟ್ರಕ್ಕೆ ಸಂದಂಥ ಗೌರವವಾಗಿದೆ. ಕಪಿಲ್ದೇವ್ರವರಿಗೆ ಕ್ರಿಕೆಟ್ನಲ್ಲಿರುವ ಅರ್ಪಣಾ ಮನೋಭಾವವು ನಮ್ಮ ನಾಡಿನ ಯುವಕರೆಲ್ಲರಿಗೂ ಅನುಕರಣೀಯವಾಗಲಿ. ಇಂಥ ಶುಭ ಸಂದರ್ಭದಲ್ಲಿ ಕಪಿಲ್ದೇವ್ರವರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ಅವರು ರಾಷ್ಟ್ರದ ಖ್ಯಾತಿಯನ್ನು ಮತ್ತೂ ಹೆಚ್ಚಿಸುವಂತಾಗಲಿ, ಸದುದ್ದಾಯಕರಾಗಿ ಚಿರಕಾಲ ಬಾಳಲಿ ಎಂದು ಗೌರವಾದರಗಳಿಂದ ಅವರನ್ನು ಈ ಸದನವು ಹಾರೈಸುತ್ತದೆ.

ಸಭೆಯು ಈಗ ಮುಕ್ತಾಯಗೊಂಡು ಪುನಃ ನಾಳೆ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 7 ಗಂಟೆ 24 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 10ನೇ ಫೆಬ್ರವರಿ ಮಾಹೆ 1994ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)